بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 45

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

19 ನವೆಂಬರ್ 2020, 19 ನಬುವ್ವತ್ 1399 ಹಿಜರಿ ಶಮ್‌ಸಿ,
03 ರಬಿಉಸ್ಸಾನಿ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ اللّٰهَ لَا يَغْفِرُ اَنْ يُّشْرَكَ بِهٖ وَيَغْفِرُ مَا دُوْنَ ذٰلِكَ لِمَنْ يَّشَآءُ ۭ وَمَنْ يُّشْرِكْ بِاللّٰهِ فَقَدْ ضَلَّ ضَلٰلًۢا بَعِيْدًا

*(ಅನ್ನಿಸಾಅ್:117)*

ಅಂದರೆ: ತನ್ನೊಂದಿಗೆ ಏನನ್ನಾದರೂ ಸಹಭಾಗಿಯಾಗಿ ಕಲ್ಪಿಸುವುದನ್ನು ಖಂಡಿತವಾಗಿಯೂ ಅಲ್ಲಾಹನು ಕ್ಷಮಿಸಲಾರ. ಅದರ ಹೊರತು ಇತರ ಪಾಪಗಳನ್ನು ತಾನು ಉದ್ದೇಶಿಸುವವರಿಗೆ ಅವನು ಕ್ಷಮಿಸಿಕೊಡುವನು. ಯಾರು ಅಲ್ಲಾಹನಿಗೆ ಸಹಭಾಗಿತ್ವವನ್ನು ಕಲ್ಪಿಸುತ್ತಾನೋ ನಿಸ್ಸಂದೇಹವಾಗಿಯೂ ಅವನು ಮಾರ್ಗಭ್ರಂಶನಾಗಿ ಬಹುದೂರ ಅಗಲಿ ಹೋಗುತ್ತಾನೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಹಝ್‌ರತ್ ರಸೂಲುಲ್ಲಾಹ್(ಸ) ರವರ ಒಂದು ಸುಂದರವಾದ ಪ್ರಾರ್ಥನೆ

ಹಝ್‌ರತ್ ಮುಗ್ವೀರ ಬಿನ್ ಸುಭ ಅವರ ಲೇಖಕ ವರ್ರಾದ್‌ರಿಂದ ವರದಿಯಿದೆ. ಹಝ್‌ರತ್ ಮುಗ್ವೀರ ಬಿನ್ ಶುಬ ನನ್ನಿಂದ ಒಂದು ಪತ್ರ ಬರೆಸಿದರು ಅದು ಹಜ್‌ರತ್ ಮುಆವಿಯ ಅವರಿಗೆ ಬರೆಯಲಾಗಿತ್ತು. ನಬಿ ಕರೀಂ(ಸ) ಫರ್ಝ್ ನಮಾಝ್ ನಂತರ ಹೇಳುತ್ತಿದ್ದರು.

“ಅಲ್ಲಾಹನ ಹೊರತು ಯಾರೂ ಆರಾಧ್ಯನಲ್ಲ, ಅವನು ಏಕನು. ಅವನಿಗೆ ಸರಿಸಮಾನ ಯಾರೂ ಇಲ್ಲ. ಅವನೇ ರಾಜಾಧಿರಾಜನು. ಎಲ್ಲ ಸ್ತುತಿಗಳಿಗೆ ಅವನೇ ಅರ್ಹನು. ಅವನು ಎಲ್ಲ ವಿಷಯಗಳಲ್ಲಿಯೂ ಸರ್ವ ಸಮರ್ಥನು.

ಓ ಅಲ್ಲಾಹ್! ನೀನು ಕೊಡುವವನಾದರೆ ಯಾರಿಗೂ ತಡೆಯಲು ಸಾಧ್ಯವಿಲ್ಲ. ಮತ್ತು ಯಾವುದರಿಂದ ನೀನು ತಡೆಯುವೆಯೋ ಅದನ್ನು ಕೊಡಲು ಯಾರಿಂದಲೂ ಸಾಧ್ಯವಿಲ್ಲ. ಎಂತಹ ಸಮರ್ಥನಾದವನಿದ್ದರೂ, ನಿನ್ನ ಎದುರಿನಲ್ಲಿ ಅವನ ಸಾಮರ್ಥ್ಯ ಯಾವ ಉಪಯೋಗಕ್ಕೂ ಇಲ್ಲ. **(ಸಹೀ ಬುಖಾರಿ, ಕಿತಾಬುಲ್ ಅರಭಾನ್, ಸಂಪುಟ–2, ಮುದ್ರಣ ಖಾದಿಯಾನ್ 2006)**

## ಅಂತ್ಯ ದಿನದ ಮೇಲೆ ದೃಷ್ಟಿ ಹಾಯಿಸುವವರು ಧನ್ಯರು

**ಮನುಷ್ಯನಾದವನಿಗೆ ಅಂತ್ಯ ದಿನದ ಮೇಲೆ ದೃಷ್ಟಿ ಇಡುವುದು. ಮತ್ತು ಪಶ್ಚಾತ್ತಾಪ ಪಡುವುದು ಅನಿವಾರ್ಯವಾಗಿರುತ್ತದೆ. ಏಕೆಂದರೆ ಅದರಲ್ಲಿಯೇ ನಿಜವಾದ ಸಂತೋಷ ಹಾಗೂ ನೆಮ್ಮದಿ ಇದೆ.**

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ನಾನು ನೋಡುತಿದ್ದೇನೆ. ಆಪತ್ತಿನ ಮೇಲೆ ಆಪತ್ತು ಬಂದೆರಗಿದರೂ ಮತ್ತು ಎಲ್ಲೆಡೆ ಅಪಾಯ ತಲೆದೋರುವುದನ್ನು ಕಂಡು ಜನರು ಸಹ ಕಠಿಣ ಹೃದಯಿಗಳಾಗಿದ್ದಾರೆ ಮತ್ತು ಅಹಂಕಾರದಿಂದ ವರ್ತಿಸುತ್ತಿದ್ದಾರೆ. ಮೂರ್ಖರು ಎಲ್ಲಿಯವರೆಗೆ ಹೀಗೆ ನಿಶ್ಚಿಂತೆಯಿಂದ ಬಾಳಲು ಸಾಧ್ಯ. ಅದಾಗ್ಯೂ ಹಠ ಬಿಡದೆ, ತಮ್ಮ ದುಷ್ಕೃತ್ಯಗಳಿಂದ ದೂರ ಉಳಿಯದೆ, ಮತ್ತು ಅಲ್ಲಾಹನೊಂದಿಗೆ ರಾಜಿಯಾಗದೆ ಈ ಆಪತ್ತುಗಳು ಮತ್ತು ಕಷ್ಟಗಳು ದೂರವಾಗಲಾರದು. ನಾನು ಕಂಡಿರುತ್ತೇನೆ ಮತ್ತು ಬಹಳ ಗಹನವಾಗಿ ಯೋಚಿಸಿರುತ್ತೇನೆ. ಬರಗಾಲದ ದಿನಗಳಲ್ಲಿ ಜನರು ಒಂದಿಷ್ಟಾದರೂ ಬರ, ಬವಣೆಯನ್ನು ಲೆಕ್ಕಿಸಲಿಲ್ಲ. ಮದ್ಯದಂಗಡಿಗಳು ಇದ್ದ ಹಾಗೆಯೇ ಜನನಿಬಿಡವಾಗಿವೆ ಮತ್ತು ದುಷ್ಕೃತ್ಯಗಳು ಅವ್ಯಾಹಿತವಾಗಿ ಜಾರಿಯಲ್ಲಿವೆ. ಪ್ರಾರಂಭದಲ್ಲಿ ಮಕ್ಕ ಮದೀನದಿಂದ ಹೆಸರಿಗೆ ಮಾತ್ರ ಫತ್ವಾ ಬಂದರೂ ಹೆದರುತ್ತಿದ್ದರು. ಮತ್ತು ಮಸೀದಿಗಳು ತುಂಬಿ ಹೋಗುತ್ತಿದ್ದವು. ಆದರೆ ಇದೀಗ ಹಟಮಾರಿತನ ಮತ್ತು ಅಲಕ್ಷ್ಯತನವು ಮಿತಿಮೀರಿ ಹೋಗಿವೆ. ಅಲ್ಲಾಹನು ದಯೆತೋರಬೇಕು.

ಶಿಕ್ಷೆ ಬರುವ ಮುಂಚೆ ಎಚ್ಚೆತ್ತಿಕೊಳ್ಳುವವನು ವಿವೇಕವಂತನು ಮತ್ತು ದೂರದ ಅಪಾಯವನ್ನು ಗ್ರಹಿಸಿಕೊಳ್ಳುವವನೇ ಬುದ್ಧಿವಂತನು. ಅವರು ಆಪತ್ತುಗಳು ಬರುವ ಮುಂಚೆಯೇ ರಕ್ಷಣೆಯ ಚಿಂತೆ ಮಾಡುವರು.

ಅಂತ್ಯದಿನದ ಮೆಲೆ ದೃಷ್ಟಿಬೀರಿ ದುಷ್ಕೃತ್ಯಗಳಿಂದ ಪಶ್ಚಾತ್ತಾಪಪಡಬೇಕು. ಏಕೆಂದರೆ ಅದರಲ್ಲಿಯೇ ನಿಜವಾದ ಸಂತೋಷ ಮತ್ತು ನೆಮ್ಮದಿ ಇದೆ. ಇದೊಂದು ನಿಶ್ಚಿತವಾದ ಕಾರ್ಯವಿಧಿಯಾಗಿದೆ. ಯಾವುದೇ ದುಷ್ಕೃತ್ಯ ಹಾಗೂ ಪಾಪವು ಕ್ಷಣಮಾತ್ರಕ್ಕೂ ನಿಜವಾದ ಸುಖ ನೀಡಲು ಸಾಧ್ಯವಿಲ್ಲ. ದುಷ್ಕರ್ಮಿಗಳಿಗೆ ಪ್ರತಿಕ್ಷಣವೂ ರಹಸ್ಯ ಬಯಲಾಗುವ ಚಿಂತೆಯಿರುತ್ತದೆ. ಹೀಗಿರುವಾಗ ಅವನಿಗೆ ಸಂತೋಷ ಹೇಗೆ ನೋಡಲು ಸಾಧ್ಯವಾದೀತು. ನಿಶ್ಚಯವಾಗಿಯೂ ಅಂತ್ಯದಿನದ ಮೇಲೆ ದೃಷ್ಟಿ ಇರಿಸಿಕೊಳ್ಳುವರು ಧನ್ಯರು.

ಕಾಲಕಾಲಕ್ಕೆ ಅಲ್ಲಾಹನ ಶಿಕ್ಷೆ ಬಂದ ಸಮುದಾಯಗಳ ಸ್ಥಿತಿಗತಿಯನ್ನು ನೋಡಿರಿ. ಪ್ರತಿಯೊಬ್ಬರು ಅವರ ಹೃದಯಗಳು ಕಠಿಣಗೊಂಡರೂ ಅದರ ಮೇಲೆ ಪಶ್ಚಾತ್ತಾಪಪಟ್ಟು ಆತ್ಮ ಶುದ್ಧಿಗಾಗಿ ಚಿಂತಿಸುವುದು ಅಗತ್ಯವಾಗಿದೆ. ಅಳು ಬರುತ್ತಿಲ್ಲವಾದರೆ ಅಳುವ ಹಾಗೆ ರೂಪ ಕೈಗೊಳ್ಳಿ ಆಗ ತಂತಾನೆ ಕಣ್ಣುಗಳಿಂದ ನೀರು ಬರುವುದು.

**(ಮಲ್ಫೂಝಾತ್, ಸಂಪುಟ 1, ಪುಟ 221–222, ಮುದ್ರಣ ಖಾದಿಯನ್ 2018)**

## ಇಹ್‌ದಿನ್‌ಸಿರಾತಲ್ ಮುಸ್ತಖೀಮ್ ಒಂದು ಅದ್ವಿತೀಯ ಪ್ರಾರ್ಥನೆಯಾಗಿದೆ! ಯಾವುದೇ ಸಣ್ಣಪುಟ್ಟ ಅಥವಾ ದೊಡ್ಡ ಪ್ರಮಾಣದ ಅಗತ್ಯವಾಗಿರಲಿ ಮತ್ತು ಇಹಲೋಕ ಅಥವಾ ಪರಲೋಕಕ್ಕೆ ಸಂಬಂಧಿಸಿದ್ದಾಗಲಿ ಈ ಪ್ರಾರ್ಥನೆಯಿಂದ ಪ್ರಯೋಜನ ಪಡೆಯಬಹುದಾಗಿದೆ.

“ಇಹ್‌ದಿನ್‌ಸ್ಸಿರಾತಲ್ ಮುಸ್ತಖೀಮ್” ವ್ಯಾಖ್ಯಾನ ಮಾಡುತ್ತ ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ. ಈ ವಚನದಲ್ಲಿ ಎಂತಹ ಒಂದು ಮಹೋನ್ನತ ಮತ್ತು ಪರಿಪೂರ್ಣ ಪ್ರಾರ್ಥನೆ ಕಲ್ಪಿಸಲಾಗಿದೆ ಎಂದರೆ ಉದಾಹರಣೆ ಸಹ ಲಭಿಸಲಾರದು. ಈ ಪ್ರಾರ್ಥನೆ ಯಾವುದೆ ವಿಶೇಷ ಕಾರ್ಯಕ್ಕಾಗಿ ಅಲ್ಲ. ಬದಲು ಪ್ರತಿ ಸಣ್ಣಪುಟ್ಟ ಅಗತ್ಯಕ್ಕಾಗಲಿ ಅಥವಾ ಇಹ–ಪರ ಅಗತ್ಯಗಳಿಗಾಗಲಿ ಈ ಪ್ರಾರ್ಥನೆಯಿಂದ ಪ್ರಯೋಜನ ಪಡೆಯಬಹುದಾಗಿದೆ. ಎಲ್ಲ ಕಾರ್ಯಗಳಿಗಾಗಿ ಅದು ಇಹಲೋಕಕ್ಕೆ ಸಂಬಂಧಿಸಿದ್ದಾಗಲಿ ಅಥವಾ ಪರಲೋಕಕ್ಕೆ ಸಂಬಂಧಿಸಿದ್ದಾಗಲಿ ಅದನ್ನು ಪೂರ್ಣಗೊಳಿಸಲು ಒಂದಿಲ್ಲೊಂದು ಕಾರ್ಯ ವಿಧಾನವಿರುತ್ತದೆ. ಅದನ್ನು ಅನುಸರಿಸಿದಾಗ ಮಾತ್ರ ಯಶಸ್ಸು ದೊರೆಯುವುದು. ಇಲ್ಲವಾದರೆ ದೊರೆಯದು. ಮತ್ತೆ ಕೆಲವೊಮ್ಮೆ ಹಲವು ವಿಧಾನಗಳನ್ನು ಏಕ ಕಾರ್ಯ ಮಾಡಲು ಯೋಜಿಸಿರುತ್ತಾರೆ. ಅದರಲ್ಲಿ ಕೆಲವು ಧರ್ಮಸಮ್ಮತವಾಗಿದ್ದರೆ ಕೆಲವು ಧರ್ಮಬಾಹಿರವಾಗಿರುತ್ತದೆ. ಕೆಲವು ಮಾರ್ಗಗಳಿರುತ್ತವೆ. ಅದರಲ್ಲಿ ಕೆಲವು ಬೇಗ ಗುರಿ ತಲುಪಿದರೆ ಕೆಲವು ತಡವಾಗಿ ಗುರಿ ತಲುಪುತ್ತಿವೆ. ಇಹ್‌ದಿನಸ್ಸಿರಾತಲ್ ಮುಸ್ತಖೀಮ್” ಪ್ರಾರ್ಥನೆಯಲ್ಲಿ ನಮಗೆ ಕಲ್ಪಿಸಲಾಗಿದೆ. ನಾವು ಅಲ್ಲಾಹನಿಂದ ಒಳ್ಳೆಯ ಹಾಗೂ ಸನ್ಮಾರ್ಗದೆಡೆ ನಡೆಯಲು ಮಾರ್ಗದರ್ಶನ ಬೇಡಬೇಕು. ಆ ಮೂಲಕ ನಾವು ಬಹುಬೇಗ ವಿಜಯಿಯಾಗಿ ತಮ್ಮ ಗುರಿ ತಲುಪುವಂತಾಗಲಿ ಎಂದು.

ಎಂತಹ ಸರಳ ಮತ್ತು ಎಂತಹ ಪರಿಪೂರ್ಣ ಪ್ರಾರ್ಥನೆಯಾಗಿದೆ. ಮತ್ತು ಎಷ್ಟೊಂದು ವೈಶಾಲತೆ ಹೊಂದಿದೆ. ಜೀವನದ ಅದು ಯಾವ ಸಾದನೆಯಿಂದ ಅದು ಈ ಪ್ರಾರ್ಥನೆಯಿಂದ ಸಾದಿಸದಿರಲು ಯಾವ ವ್ಯಕ್ತಿ ಈ ಪ್ರಾರ್ಥನೆ ಅಭ್ಯಸಿಸಿಕೊಂಡು ಅಳವಡಿಸಿಕೊಳ್ಳುವನೋ ಅವನ ಶ್ರಮ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

## ದೃಷ್ಟಾಂತ ತೋರಿಸದ ಪಕ್ಷದಲ್ಲಿ ಒಂದು ನೂರು ರೂಪಾಯಿ ಅಥವಾ ಒಂದು ತಿಂಗಳಿನ ಸಂಬಳದ ದುಪ್ಪಟ್ಟು ದಂಡರೂಪದಲ್ಲಿ ನೀಡುವ ವಾಗ್ದಾನ.

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ದೃಷ್ಟಾಂತ ತೋರಿಸುವ ಈ ಪಂಥಹ್ವಾನ ತನ್ನ "ಶಹನ ಹಖ್" ಎಂಬ ಗ್ರಂಥದಲ್ಲಿ ನೀಡಿದ್ದಾರೆ. ಅವರು ತನ್ನ ಗ್ರಂಥ "ಸುರ್ಮ ಚಶ್ಮ ಆರ್ಯ" ದಲ್ಲಿ ವಿರೋದಿಗಳಿಗೆ ಹಲವು ಪಂಥಹ್ವಾನಗಳನ್ನು ನೀಡಿದ್ದರು. ಎಷ್ಟೋ ರೀತಿಯಲ್ಲಿ ವಾದಿಸಲು ಆಹ್ವಾನಿಸಿದರು. ಮುಬಾಹಲಕ್ಕಾಗಿ ಕರೆದರು. ಸತ್ಯಾನ್ವೇಷಿಗಳಿಗೆ ದೃಷ್ಟಾಂತ ತೋರಿಸುವ ವಾಗ್ದನ ಮಾಡಿದರು. ಆದರೆ ಯಾರು ಸಹ ಯಾವುದೇ ಪಂಥ್ವಾನ ಸ್ವೀಕರಿಸಲಿಲ್ಲ. ಗ್ರಂಥದ ಕೊನೆಯ ಪುಟದಲ್ಲಿ ಅವರು ಈ ಜಾಹಿರಾತು ನೀಡಿದರು. ಆರ್ಯರ ಮತ್ತು ವೇದಗಳ ವಿಶ್ವಾಸಗಳ ರದ್ದತಿಯಲ್ಲಿ ಏನೆಲ್ಲ ಸಾಕ್ಷ್ಯಗಳು ಈ ಗ್ರಂಥದಲ್ಲಿ ಒದಗಿಸಿರುವೆನೋ. ಯಾರಾದರೂ ಆರ್ಯ ಅಥವಾ ಹಿಂದೂ ಈ ಸಾಕ್ಷ್ಯಗಳನ್ನು ಅಲ್ಲಗಳೆದು ತೋರಿಸಿದರೆ ಅವರಿಗೆ ಐದು ನೂರು ರೂಪಾಯಿಗಳ ಬಹುಮಾನ ನೀಡಲಾಗುವುದು. ಆದರೆ ಅವರು ಪರಿಪೂರ್ಣ ವಿಶ್ವಾಸದಿಂದ ಇದನ್ನು ಸಹ ಹೇಳಿದರು. ಯಾವ ಆರ್ಯನು ಈ ಗ್ರಂಥದ ವಿರುದ್ಧ ಬರೆಯಲು ಸಾಧ್ಯವಿಲ್ಲ. ಏಕೆಂದರೆ ಸತ್ಯದ ಮುಂದೆ ಮಿಥ್ಯ ನಿಲ್ಲಲು ಸಾಧ್ಯವಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ಜನರು ಒಬ್ಬ ದಾಸನನ್ನು ದೇವನಿಂದ ಶಕ್ತಿ ಪಡೆದು ಅವನ ಅನುಗ್ರಹಕ್ಕೆ ಪಾತ್ರರಾಗಿ ಅಧರ್ಮ ಹಾಗೂ ಅವಿಶ್ವಾಸಗಳನ್ನು ದೂರ ಮಾಡಲು ಟೊಂಕಕಟ್ಟಿ ನಿಂತಿದ್ದನ್ನು ನೋಡುವುದಾದರೆ, ಅವನ ಭಾಷಣ ಅವನ ಬರಹ ಅವನ ನಾಲಿಗೆಯಿಂದ ಹೊರಡುವ ಶಬ್ದಗಳು ಅನುಗ್ರಹಗಳಿಂದ ದೇವನ ಕಾರಣ್ಯದಿಂದ ತುಂಬಿರುವುದನ್ನು ಕಾಣುವಾಗ ಅದು ಒಂದು ಬೆಂಕಿಯ ಜ್ವಾಲೆಯ ರೂಪದಲ್ಲಿ ಸುಟ್ಟು ಹಾಕುವುದು ಎಂದು ತಿಳಿದುಕೊಳ್ಳುತ್ತಾರೆ. ಆಗ ಅವರ ಮೇಲೆ ಕಂಪನ ಉಂಟಾಗುತ್ತದೆ. ಅವನ ಎದುರು ನಿಂತರೆ ಆ ಜ್ವಾಲೆ ನಮ್ಮ ಅಪವಿತ್ರ ತತ್ವಗಳನ್ನು ಮತ್ತು ವಿಶ್ವಾಸಗಳನ್ನು ಅದು ಧರ್ಮದ ಬುನಾದಿಯಾಗಿರುತ್ತದೆ. ನಾಶಗೊಳಿಸಬಹುದು ಎಂದು ಭಾವಿಸಿಕೊಳ್ಳುತ್ತಾರೆ. ಆಗ ಅವರ ಮೊದಲ ಯೋಚನೆ ಯಾವುದೇ ರೀತಿಯಲ್ಲಿ ಬೈಗುಳಗಳ ಮೂಲಕ ಮತ್ತು ಅಪಶಬ್ಧಗಳ ಮೂಲಕ ಆ ಸತ್ಯವಂತನ ಬಾಯಿ ಮುಚ್ಚಿಸುವುದಾಗಿರುತ್ತದೆ. ಅದರ ಪ್ರಭಾವವು ಆಗದಂತೆ ಕಂಡರೆ ಮತ್ತೆ ಆರೋಪ ಪ್ರತ್ಯಾರೋಪಗಳಿಂದ ತಮ್ಮ ಉದ್ದೇಶ ಸಾಧಿಸಬಯಸುತ್ತಾರೆ. ಏಕೆಂದರೆ ಅವನಿಗೆ ಈ ಕೆಲಸದಿಂದ ತಡೆಯಲು ಸಾಧ್ಯವಾಗುವುದಿಲ್ಲ. ಕನಿಷ್ಠಮಟ್ಟ ಜನರನ್ನೇ ಗೊಂದಲಕ್ಕೆ ಸಿಕ್ಕಿಸಿದರೆ ಆಯಿತು. ಅದರಲ್ಲಿಯೂ ಸೋಲನನ್ನುಭವಿಸಿದಾಗ ಅವರ ಜೀವದ ಮೇಲೆ ಹಲ್ಲೆ ಮಾಡಬಯಸುತ್ತಾರೆ. (ಶಹನ ಹಖ್, ರೂಹಾನಿ ಖಝಾಈನ್, ಸಂಪುಟ–2, ಪುಟ–327)

ಸುರ್ಮ ಚಶ್ಮ ಆರ್ಯ ವಿಷಯದಲ್ಲಿ ಹೀಗೆಯೇ ಆಯಿತು. ಈ ಗ್ರಂಥದ ಸಾಕ್ಷ್ಯಗಳು ರದ್ದುಗೊಳಿಸು ಸಾಧ್ಯವಿರಲಿಲ್ಲ. ಅದು ವಿರೋಧಿಗಳನ್ನು ಸಂಕಷ್ಟದಲ್ಲಿ ಸಿಲುಕಿಸಿತು. ಈಗ ವಿರೋಧಿಗಳಿಗೆ ಆರೋಪ ಪ್ರತ್ಯಾರೋಪಗಳಲ್ಲಿ ತೊಡಗದೆ ಬೇರೆ ದಾರಿ ಇರಲಿಲ್ಲ. ಇದೊಂದೇ ನೀಚ ಆಯುಧ ಅವರ ಕೈಯಲ್ಲಿತ್ತು. ಹಾಗಾಗಿ ಅವರು ಒಂದು ಅತ್ಯಂತ ಅಶ್ಲೀಲ ಹಾಗೂ ಮಿಥ್ಯಾರೋಪಗಳಿಂದ ತುಂಬಿದ ಸುರ್ಮ ಚಶ್ಮ ಆರ್ಯ ವಾಸ್ತವ ಮತ್ತು ಮೋಸಗಾರ ಗುಲಾಂ ಅಹ್ಮದ್‌ನ ಸ್ಥಿತಿ. ಪತ್ರಿಕೆ ಪ್ರಕಟಿಸಿದರು ಮತ್ತು ಅವರಿಗೆ ಕೊಲೆ ಮಾಡುವ ಬೆದರಿಕೆ ಒಡ್ಡಲಾಯಿತು. ಆಗ ಈ ಪತ್ರಿಕೆಯ ಉತ್ತರವಾಗಿ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) "ಶಹನ ಹಖ್" ಗ್ರಂಥ ರಚಿಸಿದರು. ಅವರು ಗ್ರಂಥದ ಈ ಹೆಸರಿಡಲು ಕಾರಣ ವಿವರಿಸುತ್ತ ಹೇಳುತ್ತಾರೆ.

ಈ ಪತ್ರಿಕೆಯಲ್ಲಿ ಅವರ ಆಧಾರವಿಲ್ಲದ ಟಿಪ್ಪಣಿಗಳ ಮೇಲೆ ಎಚ್ಚರಿಕೆಯ ತಾರಕೋಲ್ ಬಾರಿಸುವುದ. ಅವರ ಆರೋಪಗಳ ಮತ್ತು ದೂಷಣೆಗಳ ಮೇಲೆ ದಾಳಿ ಮಾಡಿ ನುಚ್ಚುನೂರು ಮಾಡುವ ಉದ್ದೇಶದಿಂದ ಈ ಪತ್ರಿಕೆಯ ಹೆಸರು "ಶಹನ ಹಖ್" ಎಂದು ಇಡಲಾಗಿದೆ ಏಕೆಂದರೆ ಈ ಪತ್ರಿಕೆ ಆರ್ಯರ ಪುಂಡಾಟಿಕೆಯುಳ್ಳ ಜನರನ್ನು ಸುಧಾರಿಸಲು "ಶಹನ ಹಖ್" (ಸತ್ಯದ ಕಹಳೆ) ರೂಪ ತಾಳುತ್ತದೆ. ಹಾಸ್ಯ ಮಾಧ್ಯಮವಾಗಿ ಈ ಪತ್ರಿಕೆಯ ಇನ್ನೊಂದು ಹೀಗಿದೆ. "ಆರ್ಯರಲ್ಲಿ ಒಂದಿಷ್ಟು ಸೇವೆ ಮತ್ತು ಅವರ ವೇದಗಳ ಮತ್ತು ಟೀಕೆಗಳ ಒಂದಿಷ್ಟು ಮಾಹಿತಿ."

ಇದಕ್ಕಿಂತ ಮುಂಚೆ ನಾವು ಹಝ್ರತ್ ಮಸ್ಲೀಹ್ ಮೌಊದ್(ಅ) ಅವರಿಂದ ನೀಡಲ್ಪಟ್ಟ ದೃಷ್ಟಾಂತ ಸಾಧನೆಯ ಒಂದು ಅಮೋಘವಾದ ಪಂಥಹ್ವಾನ ಸುರ್ಮ ಚಶ್ಮ ಆರ್ಯ ಗ್ರಂಥದಿಂದ ಅಖ್ಬಾರ್ ಬದರ್ 3 ಸೆಪ್ಟೆಂಬರ್ ಸಂಚಿಕೆ ಸಂಖ್ಯೆ 36 ರಲ್ಲಿ ಪ್ರಸ್ತುತಪಡಿಸಿದ್ದೇವೆ. ಅದರಲ್ಲಿ ಸಯ್ಯದನ ಹಝ್ರತ್ ಮಸೀಹ್ ಮೌಊದ್(ಅ) ಐದು ನೂರು ರೂಪಯಿಗಳ ಬಹುಮಾನ ನಿಗದಿಪಡಿಸಿದ್ದರು.

ಆದರೆ ಈ ದೃಷ್ಟಾಂತ ಸಾಧನೆಯ ಪಂಥಹ್ವಾನದಲ್ಲಿ ಅವರು ಒಂದು ನೂರು ರೂಪಾಯಿ ಅಥವಾ ಬ್ರಿಟಿಷ್ ಸರಕಾರ ನೀಡುತ್ತಿದ್ದ ಒಂದು ತಿಂಗಳಿನ ಸಂಬಳದ ದ್ವಿಗುಣ ನಿಗದಿಪಡಿಸಿದರು. ಈ ನೆಲೆಯಲ್ಲಿ ನಾವು ಈ ಎರಡೂ ಪಂಥಹ್ವಾನಗಳನ್ನು ಬೇರೆ ಬೇರೆ ಎಂದು ಪರಿಗಣಿಸಿ ಈ ಪಂಥಹ್ವಾನವನ್ನು ಪ್ರತ್ಯೇಕ ಪ್ರಬಂಧದ ರೂಪದಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ.

ಮೇಲ್ಕಾಣಿಸಿದ ಮಿಥ್ಯದಿಂದ ತುಂಬಿದ ಪತ್ರಿಕೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ಈ ಆರೋಪ ಹಚ್ಚಲಾಯಿತು. ಬರಾಹೀನೆ ಅಹ್ಮದಿಯಾದಲ್ಲಿ ನಮೂದಿತ ಅವರ ದೇವವಾಣಿಗಳು, ಅವರ ಭವಿಷ್ಯವಾಣಿಗಳೆಲ್ಲ ಮಿಥ್ಯವಾಗಿವೆ ಮತ್ತು ಮೋಸವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಅದರ ಅತ್ಯಂತ ಔಚಿತ್ಯಪೂರ್ಣ ಮತ್ತು ತೃಪ್ತಿದಾಯಕ ಉತ್ತರವನ್ನು ನೀಡಿದ್ದಾರೆ. ಇದೆಲ್ಲ ಮೋಸವಾದರೆ ನಾನಂತೂ ಜೀವಂತವಾಗಿದ್ದೇನೆ ಮತ್ತು ದೃಷ್ಟಾಂತ ತೋರಿಸಲು ಯಾವಾಗಲೂ ಸಿದ್ಧನಾಗಿದ್ದೇನೆ ಮತ್ತು ಹಲವು ವರ್ಷಗಳಿಂದ ಆಹ್ವಾನಿಸುತ್ತಿದ್ದೇನೆ. ಆದರೂ ಈ ಜನರು ದೃಷ್ಟಾಂತ ನೋಡಲು ಏಕೆ ಬರುತ್ತಿಲ್ಲ? ಅವರ ಈ ಅಮೋಘವಾದ ಉತ್ತರ ಮತ್ತು ಅವರು ನೀಡಿದ ಪಂಥಹ್ವಾನ ನಾವು ಅವರದ್ದೇ ಪದಗಳಲ್ಲಿ ಈ ಕೆಳಗೆ ನಮೂದಿಸುತ್ತಿದ್ದೆವೆ. ಅವರು ಹೇಳುತ್ತಾರೆ:

"ನಮ್ಮ ದೇವವಾಣಿಗಳ ಹೆಸರು ಮೋಸ ಎನ್ನುವುದು ಅಥವಾ ವಂಚನೆಯನ್ನು ಸಾರುವುದಾರೆ ಇದು ಹಿಂದೂ ಬಾಂಧವರಿಗೆ ಆಗ ಸರಿ ಕಾಣುತ್ತಿತ್ತು. ಅವರು ನಾವು ಕರೆದಾಗ ನಮ್ಮ ಬಾಗಿಲಿಗೆ ಬಂದು ಹಾಜರಾಗಬೇಕಿತ್ತು. ಆದರೆ ನಾವು ಸುರ್ಮ ಚಶ್ಮ ಆರ್ಯದಲ್ಲಿ ನಲವತ್ತು ದಿನಗಳ ವಾಸದ ಜಾಹಿರಾತು ಜಾರಿ ಮಾಡಿ ನೋಡಿದೆವು. ಯಾವ ಹಿಂದೂ ಸಹ ಕಿವಿಗೊಡಲಿಲ್ಲ. ತುಸು ಯೋಚನೆ ಮಾಡಿ ನೋಡಿರಿ. ಯಾವ ವ್ಯಕ್ತಿ ಇಡೀ ಪ್ರಪಂಚದಲ್ಲಿ ತನ್ನ ದೇವವಾಣಿಯ ದಾವೆಯ ಜಾಹಿರಾತು ಪ್ರಕಟಿಸಿ ಕಳುಹಿಸಿಕೊಟ್ಟು ಎಲ್ಲ ತರದ ವಿರೋಧಿಗಳಿಗೆ ಪರೀಕ್ಷಿಸಲು ಕರೆ ನೀಡುವನೋ ಅವನ ಈ ದೈರ್ಯ ಮತ್ತು ಸಾಹಸದ ಬುನಾದಿ ಮೋಸಗಾರಿಕೆಯ ಮೇಲೆ ನಿಲ್ಲಬಹುದೆ? ಯಾವನು ಇಸ್ಲಾಮ್ ಧರ್ಮದ ಸಂದೇಶ, ದೇವವಾಣಿಯ ದಾವೆ ಆಧಾರಿತ ಪತ್ರಗಳನ್ನು ಅಮೇರಿಕ ಮತ್ತು ಯೂರೋಪಿನ ದೂರ ದೂರದ ದೇಶಗಳಿಗೆ ತಲುಪಿಸಿ ಕೋಲಾಹಲ ಎಬ್ಬಿಸಿದನೋ ಅವನ ಸ್ಥಿರತೆಯ ಬುನಾದಿ ಕೇವಲ ಬೂಟಾಟಿಕೆಯ ಮೇಲೆ ನಿಲ್ಲಬಹುದೆ? ಇಡೀ ಪ್ರಪಂಚದ ಎದುರು, ತನ್ನನ್ನು ತಾನು ಮೋಸಗಾರಿಕೆ ಎಂದು ತಿಳಿದಿರುವನು. ಅವನ ಜೊತೆ ಅವನ ದೇವರು ಇಲ್ಲ ಎಂದಾದರೆ, ಅವನು ಸುಳ್ಳುಗಾರ ಎಂದಾದರೆ, ಇಂತಹ ದಾವೆ ಸಾರಲು ಸಾಧ್ಯವೇ? ಅಕಟಟಾಕಟ! ಆರ್ಯರ ಬುದ್ಧಿ ಭ್ರಮೆಗೊಂಡಿದೆ. ದ್ವೇಷವನ್ನು ಇಟ್ಟುಕೊಂಡಿದ್ದಾರೆ. ಕಪಟ ಮತ್ತು ದುಷ್ಟತನದಿಂದ ಅವರ ಕಣ್ಣುಗಳು ಮೋಸಹೋಗಿವೆ...... ಈಗ ಈ ವಿವೇಕಯುತ ಹಿಂದೂ ಆದವನು ಈ ದೈವಿಕ ಕಾರ್ಯವನ್ನು ಭಾರದ ಹೆಸರು ಮೋಸಗಾರಿಕೆ ಎನ್ನುತ್ತಾನೆ. ಅದರ ಉತ್ತರ ಬರೆಯಲಾಗುತ್ತದೆ. ಈ ಚಂಚಲ ಮನುಷ್ಯನ ಹೇಡಿತನದ ಕ್ರಿಯೆಗಳನ್ನು ಎತ್ತಿ ತೋರಿಸುವುದು ಅನಿವಾರ್ಯವಾಗಿದೆ. ಅವನು ಒಂದು ದೀರ್ಘ ಅವಧಿಯಿಂದ ತನ್ನ ಮುಖವಾಡಧರಿಸಿ ತಮ್ಮ ಪತ್ರಿಕೆಗಳಲ್ಲಿ ನಮ್ಮನ್ನು ಬಯ್ಯುತ್ತಾನೆ. ಕೊಲೆ ಮಾಡುವ ಬೆದರಿಕೆ ಒಡ್ಡುತ್ತಾನೆ. ಆದುದರಿಂದ "ಓ ಪ್ರಭು ಅವನ ನಮ್ಮ ಮಧ್ಯೆ ನೀನೇ ತೀರ್ಮಾನ ಮಾಡು" ಎಂಬ ಪ್ರಾರ್ಥನೆಯೊಂದಿಗೆ ನಾವು ಈ ಘೋಷಣೆಯನ್ನು ಜಾರಿ ಮಾಡುತ್ತೇವೆ ಮತ್ತು ಅವನಿಗೆಯೇ ವಿಶೇಷವಾಗಿ ನಮ್ಮನ್ನು ಪರೀಕ್ಷಿಸಲು ಆಮಂತ್ರಿಸುತ್ತೇವೆ. ಈಗ ಮುಖವಾಡ ಕಳಚಿ ನಮ್ಮ ಮುಂದೆ ಬರಲಿ ಮತ್ತು ತನ್ನ ಹೆಸರು ಹಾಗೂ ವಿಳಾಸ ತೋರಿಸಲಿ. ಮತ್ತು ನಲವತ್ತು ದಿನಗಳವರೆಗೆ ನಮ್ಮನ್ನು ಪರೀಕ್ಷಿಸಲು ನಮ್ಮ ಸಹವಾಸದಲ್ಲಿರಲಿ. ಈ ಅವಧಿಯಲ್ಲಿ ಯಾವುದೇ ಭವಿಷ್ಯವಾಣಿ ಪೂರ್ಣಗೊಂಡದ್ದು ಕಾಣುವವನಾದರೆ, ಅವನು ಅದರಲ್ಲಿ ವಿವಶನಾದರೆ ಇದೇ ಸ್ಥಳದಲ್ಲಿ ತನ್ನ ಉದ್ದದ ಜಡೆಯನ್ನು ಕತ್ತರಿಸಿ, ಮತ್ತು ವ್ಯರ್ಥದ ಮಂತ್ರಮಾಲೆಯನ್ನು ಮುರಿದು ಕಿ, ಈ ಪವಿತ್ರ ಜಮಾಅತಿನಲ್ಲಿ ಪ್ರವೇಶ ಮಾಡಲಿ. ಅದು ಲಾ–ಇಲಾಹ ಇಲ್ಲಲ್ಲಾಹ್ ಏಕದೇವತ್ವದಿಂದ ಮತ್ತು ಮುಹಮ್ಮದುರ್ ರಸೂಲುಲ್ಲಾಹ್‌ರ ಪರಿಪೂರ್ಣ ಮಾರ್ಗದರ್ಶನದಿಂದ, ಧರ್ಮಭ್ರಷ್ಠರನ್ನು ಪಥಭ್ರಷ್ಟರನ್ನು ಸರಿಯಾದ ಮಾರ್ಗದಲ್ಲಿ ತರುತ್ತದೆ. ಮತ್ತೆ ನೋಡಬಹುದು ಸರ್ವ ಸಾಮರ್ಥ್ಯಯುಳ್ಳವರು ಮತ್ತು ಶಕ್ತಿವಂತ ಮಾಲೀಕನು ಹೇಗೆ ಕ್ಷಣಾರ್ಧದಲ್ಲಿ ಆಂತರಿಕ ಮಲಿನತೆಯಿಂದ ಪರಿಶುದ್ಧಗೊಳಿಸುತ್ತದೆ ಮತ್ತು ಹೇಗೆ ಮಾಲಿನ್ಯತೆಯಿಂದ ತುಂಬಿದವನಿಗೆ ಅಲ್ಲಾಹನು ಒಂದು ಸ್ವಚ್ಚ ಪರಿಶುದ್ಧನನ್ನಾಗಿ ಮಾಡುತ್ತಾನೆ. ಆದರೆ ಈ ನಲವತ್ತು ದಿನಗಳ ಅವಧಿಯಲ್ಲಿ ಯಾವುದೇ ಭವಿಷ್ಯವಾಣಿ ಪೂರ್ಣಗೊಂಡದ್ದು ಕಾಣಲಿಲ್ಲವೆಂದಾದರೆ ಈ ನಲವತ್ತು ದಿನಗಳ ದಂಡರೂಪದಲ್ಲಿ ನೂರು ರೂಪಾಯಿ ಅಥವಾ ಬ್ರಿಟಿಷ್ ಸರಕಾರ ನೀಡುತ್ತಿರುವ ಯಾವುದೇ ಸರಕಾರಿ ನೌಕರನು ಪಡೆಯುತ್ತಿರುವ ಮಾಸಿಕ ಸಂಬಳ ನಮ್ಮಿಂದ ಪಡೆಯಬಹುದು. ಮತ್ತು ಈ ಕಾರಣವನ್ನು ಸವಿವರವಾಗಿ ಇಡೀ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಇಂದು ಇರುವ ಪವಿತ್ರ ಖುರ್‌ಆನಿನ ಪ್ರತಿಗಳೆಲ್ಲವೂ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರ(ರ) ಖಿರಾತ್ ಅಥವಾ ಪಠನ ಪ್ರಕಾರವಿರುವುದಾಗಿದೆ.**

**'ನನ್ನ ಸ್ನೇಹಿತರಾದ ಮುಸ್ಲಿಮರಿಗೆ ನನ್ನ ಸಲಾಂ ತಲುಪಿಸಿರಿ. ಹಝ್ರತ್ ಪೈಗಂಬರ್(ಸ) ನಮ್ಮ ಬಳಿ ಇರುವ ಅಲ್ಲಾಹನ ಅತ್ಯುತ್ತಮ ಅಮಾನತ್ತಾಗಿದೆ, ಅಮೂಲ್ಯ ಅನುಗ್ರಹವಾಗಿದೆ ಎಂದು ನನ್ನ ಸಮುದಾಯ ಮತ್ತು ಸಂಬಂಧಿಕರೊಡನೆ ಹೇಳಿರಿ. ನಾವು ನಮ್ಮ ಜೀವದೊಂದಿಗೆ ಈ ನಿಧಿಯನ್ನು ಸಂರಕ್ಷಿಸುತ್ತಿದ್ದೆವು. ಈಗ ನಾವು ಹೋಗುತ್ತಿದ್ದೇವೆ. ಈ ಅಮಾನತ್ತಿನ ಸುರಕ್ಷೆಯ ಜವಾಬ್ದಾರಿಯನ್ನು ನಿಮಗೆ ಒಪ್ಪಿಸುತ್ತಿದ್ದೇವೆ. ನೀವು ಇದರ ಸುರಕ್ಷೆಯಲ್ಲಿ ದೌರ್ಬಲ್ಯವನ್ನು ತೋರಿಸದಿರಿ.'**

**ರಸೂಲುಲ್ಲಾಹ್(ಸ) ರವರ ಬದರಿ ಸಹಾಬಿ, ಬದರ್ ಯುದ್ಧದಲ್ಲಿ ಶಹೀದ್ ಆದ ನಿಷ್ಠಾವಂತ ಸಹಾಬಿ ಹಝ್ರತ್ ಮುಅವ್ವಿಧ್ ಬಿನ್ ಹಾರಿಸ್(ರ) ಮತ್ತು ವಹಿ ಬರಹಗಾರ, ಮುಸ್ಲಿಮರ ಸರದಾರ ಹಾಗೂ ಉಮ್ಮತಿನ ಅತೀ ಶ್ರೇಷ್ಠ ಖಾರಿ ಉಬೈ ಬಿನ್ ಕಅಬ್ (ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16-10-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಇಂದು ನಾನು ಮೊದಲು ಪ್ರಸ್ತಾಪಿಸುವ ಸಹಾಬಿಯ ಹೆಸರು ಹಝ್ರತ್ ಮುಅವ್ವಿಧ್ ಬಿನ್ ಹಾರಿಸ್ ರಝಿಯಲ್ಲಾಹು ಅನ್‌ಹು ಎಂದಾಗಿದೆ. ಹಝ್ರತ್ ಮುಅವ್ವಿಧ್‌ರ(ರ) ಸಂಬಂಧ ಅನ್ಸಾರ್ ಗೋತ್ರವಾದ ಖಝ್‌ರಜ್‌ನೊಂದಿಗೆ ಆಗಿತ್ತು. ಹಝ್ರತ್ ಮುಅವ್ವಿಧ್‌ರ(ರ) ತಂದೆಯ ಹೆಸರು ಹಾರಿಸ್ ಬಿನ್ ರಿಫಾಅ ಎಂದಾಗಿತ್ತು. ಅವರ ತಾಯಿಯ ಹೆಸರು ಅಫ್‌ರ ಬಿನ್ತ್ ಉಬೈದ್ ಎಂದಾಗಿತ್ತು. ಹಝ್ರತ್ ಮುಆಧ್ ಮತ್ತು ಹಝ್ರತ್ ಔಫ್ ಇವರ ಸಹೋದರರಾಗಿದ್ದರು. ಈ ಮೂವರನ್ನು ಅವರ ತಂದೆಯ ಹೆಸರಿನೊಂದಿಗೆ ಮಾತ್ರವಲ್ಲ, ತಾಯಿಯ ಹೆಸರಿನೊಂದಿಗೆ ಸಹ ಸೇರಿಸಿ ಹೇಳಲಾಗುತ್ತಿತ್ತು. ಎಂದರೆ, ಈ ಮೂವರನ್ನು ಬನೂ ಅಫ್‌ರ ಎಂದೂ ಕರೆಯಲಾಗುತ್ತಿತ್ತು.
(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಭಾಗ-5, ಪುಟ-231, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-374, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಮುಅವ್ವಿಧ್ ಎಪ್ಪತ್ತು ಅನ್ಸಾರ್‌ರೊಂದಿಗೆ ಬೈಅತ್ ಅಖ್‌ಬ ಸಾನಿಯದಲ್ಲಿ ಇದ್ದರು ಎಂದು ಇಬ್ನು ಇಸ್‌ಹಾಖ್ ವರದಿ ಮಾಡಿರುವರು. ಉಮ್ಮೇ ಯಝೀದ್ ಬಿನ್ತ್ ಖೈಸ್‌ರನ್ನು ಹಝ್ರತ್ ಮುಅವ್ವಿಧ್(ರ) ವಿವಾಹ ಮಾಡಿದ್ದರು. ಆ ವಿವಾಹದಿಂದ ಅವರಿಗೆ ಎರಡು ಹೆಣ್ಮಕ್ಕಳು ಜನಿಸಿತ್ತು. ಅವರ ಹೆಸರು ರಬೀಅ್ ಬಿನ್ತ್ ಮುಅವ್ವಿಧ್ ಮತ್ತು ಹಝ್ರತ್ ಉಮ್ಮೈರ ಬಿನ್ತ್ ಮುಅವ್ವಿಧ್ ಎಂದಾಗಿತ್ತು. (ಅತ್ತಬಖಾತುಲ್‌ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-374, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಮುಅವ್ವಿಧ್‌ರಿಗೆ ತನ್ನ ಎರಡು ಸಹೋದರರಾದ ಹಝ್ರತ್ ಮುಆಧ್ ಮತ್ತು ಹಝ್ರತ್ ಔಫ್‌ರೊಂದಿಗೆ ಬದ್ರ್ ಯುದ್ಧದಲ್ಲಿ ಭಾಗವಹಿಸಲು ಸೌಭಾಗ್ಯ ಲಭಿಸಿತು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಭಾಗ-5, ಪುಟ-251, ದಆರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್, 2003)

ಬದ್ರ್ ಯುದ್ಧದಲ್ಲಿ ಬನೂ ಅಫ್‌ರ ಎಂದು ಕರೆಯಲ್ಪಡುತ್ತಿದ್ದ ಹಝ್ರತ್ ಮುಆಧ್, ಹಝ್ರತ್ ಔಫ್, ಹಝ್ರತ್ ಮುಅವ್ವಿದ್‌ರಿಗೆ ಮತ್ತು ಅವರು ಸ್ವತಂತ್ರಗೊಳಿಸಿದ್ದ ಗುಲಾಮರಾದ ಅಬೂ ಹಮ್‌ರರ ಬಳಿ ಒಂದೇ ಒಂಟೆಯಿತ್ತು. ಅದರ ಮೇಲೆ ಒಬ್ಬೊಬ್ಬರಾಗಿ ಸವಾರಿ ಮಾಡುತ್ತಿದ್ದರು. (ಕಿತಾಬುಲ್ ಮಗಾಝಿ ಲಿಲ್‌ವಾಖಿದ್, ಭಾಗ-1, ಪುಟ-38, ಬದ್ರುಲ್ ಖಿತಾಲ್, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2013)

ಈಗ ನಾನು ಹೇಳಲಿರುವ ವರದಿ ಹಝ್ರತ್ ಮುಆಧ್‌ರಿಗೆ(ರ) ಸಂಬಂಧಿಸಿ ಮೊದಲು ಪ್ರಸ್ತಾಪಿಸಲಾಗಿತ್ತು. ಆದರೆ, ಇಲ್ಲಿ ಹಝ್ರತ್ ಮುಅವ್ವಿಧ್‌ರಿಗೆ(ರ) ಸಂಬಂಧಿಸಿ ಸಹ ವಿವರಿಸುವುದು ಆವಶ್ಯಕವಾದುದಾಗಿದೆ. ಆದ್ದರಿಂದ ಇದರ ಬಗ್ಗೆ ಹೇಳುತ್ತೇನೆ.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: 'ಅಬೂಜಹಲಿನ ಸ್ಥಿತಿಯೇನೆಂದು ಯಾರು ಹೋಗಿ ನೋಡುವರು? ಎಂದು ಬದ್ರ್ ಯುದ್ಧದಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಹಝ್ರತ್ ಇಬ್ನು ಮಸ್‌ಊದ್ ಅದನ್ನು ಪತ್ತೆಹಚ್ಚಲು ಹೋದರು. ಅಫ್‌ರಾರ ಎರಡು ಮಕ್ಕಳು ಖಡ್ಗಗಳಿಂದ ತೀವ್ರವಾಗಿ ಹಲ್ಲೆ ನಡೆಸಿದ್ದ ಕಾರಣದಿಂದ ಅಬೂಜಹಲ್ ಮರಣದ ಸಮೀಪಕ್ಕೆ ತಲುಪಿದ್ದಾಗಿ ಇಬ್ನು ಮಸ್‌ಊದ್ ಕಂಡರು. "ನೀನು ಅಬೂ ಜಹಲ್ ತಾನೇ? ಎಂದು ಇಬ್ನು ಮಸ್‌ಊದ್ ಕೇಳಿದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಅಬೂ ಜಹಲಿನ ಗಡ್ಡವನ್ನು ಹಿಡಿದರು. ಅಬೂಜಹಲ್ ಹೇಳಿದ: ನೀನು ನನಗಿಂತ ದೊಡ್ಡ ವ್ಯಕ್ತಿಯನ್ನು ಎಂದಾದರೂ ಕೊಂದಿರುವಿಯಾ? ಅಥವಾ ನಿನ್ನ ಸಮುದಾಯ ನನಗಿಂತ ದೊಡ್ಡ ವ್ಯಕ್ತಿಯನ್ನು ಎಂದಾದರೂ ಕೊಂದಿತ್ತೆ? (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್-3962)

ಇದರ ವ್ಯಾಖ್ಯಾನದಲ್ಲಿ ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್ ಬುಖಾರಿಯ ವರದಿಯಿದೆ. ಅವರು ಹೇಳುತ್ತಾರೆ: ಅಫ್‌ರಾರ ಎರಡು ಮಕ್ಕಳಾದ ಮುಅವ್ವಿಧ್ ಮತ್ತು ಮುಆಧ್ ಅಬೂಜಹಲ್‌ರನ್ನು ಮರಣಕ್ಕೆ ಸಮೀಪ ತಲುಪಿಸಿದ್ದರು ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಅವರ ತಲೆಯನ್ನು ದೇಹದಿಂದ ಬೇರ್ಪಡಿಸಿದ್ದರು ಎಂದು ಕೆಲವು ವರದಿಗಳಲ್ಲಿ ಬಂದಿವೆ. ಹಝ್ರತ್ ಮಆಧ್ ಬಿನ್ ಅಮ್ರ್, ಹಝ್ರತ್ ಮಆಧ್ ಬಿನ್ ಅಫರರ ನಂತರ ಹಝ್ರತ್ ಮುಅವ್ವಿಧ್ ಬಿನ್ ಅಫ್‌ರ ಸಹ ಅಬೂ ಜಹಲ್‌ರ ಮೇಲೆ ಹಲ್ಲೆ ನಡೆಸಿರಬಹುದು ಎಂದು ಇಮಾಮ್ ಇಬ್ನು ಹಜ್‌ರ್ ತಮ್ಮ ಅನುಮಾನ ವ್ಯಕ್ತಪಡಿಸಿದ್ದಾರೆ. (ಸಹೀಹ್ ಬುಖಾರಿ ಕಿತಾಬ್ ಫರ್‌ಝುಲ್ ಖುಮಸ್, ಹದೀಸ್-3141, ಸಂಪುಟ-5, ಪುಟ-491 ಅಡಿಟಿಪ್ಪಣಿ, ಉರ್ದು ಅನುವಾದ ಪ್ರಕಟಣೆ ನಝಾರತ್ ಇಶಾಅತ್ ರಬ್ವಾಹ್)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅಬೂಜಹಲ್‌ರ ಕೊಲೆಯ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಮನುಷ್ಯನು ಖುಶಿಗಳನ್ನು ಕೊಂಡಾಡುತ್ತಾನೆ. ಯಾವುದಾದರೂ ಒಂದು ಸಂಗತಿಯನ್ನು ತನಗಾಗಿ ಪ್ರಯೋಜನಕಾರಿ ಎಂದು ಭಾವಿಸುತ್ತಾನೆ. ಆದರೆ, ಅದೇ ಸಂಗತಿ ಅವನ ವಿನಾಶ ಮತ್ತು ನಷ್ಟಕ್ಕೆ ಕಾರಣವಾಗುತ್ತದೆ. ಬದ್ರ್ ಯುದ್ಧದ ವೇಳೆ ಮಕ್ಕದ ಸತ್ಯನಷೇಧಿಗಳು ಯುದ್ಧ ಮಾಡಲು ಬಂದಾಗ, ಮುಸ್ಲಿಮರನ್ನು ಸುಲಭವಾಗಿ ಕೊಲ್ಲಬಹುದು ಎಂದು ಅವರು ಭಾವಿಸಿದ್ದರು. ನಾವು ಸಂತೋಷವನ್ನು ಆಚರಿಸುವೆವು ಮತ್ತು ತುಂಬ ಶರಾಬುಗಳನ್ನು ಕುಡಿಯುವೆವು ಎಂದು ಅಬೂಜಹಲ್ ಹೇಳಿದ್ದನು. ಈಗ ಕ್ಷಣಮಾತ್ರದಲ್ಲೇ ಮುಸ್ಲಿಮರನ್ನು ಕೊಂದೇ ಮರಳುವೆವು ಎಂದು ಭಾವಿಸಿದ್ದರು. ಆದರೆ ಅದೇ ಅಬೂಜಹಲ್‌ನನ್ನು ಮದೀನದ ಎರಡು ಹುಡುಗರು ಕೊಂದರು.ಮಕ್ಕದ ಸತ್ಯನಿಷೇಧಿಗಳು

ಮದೀನದವರನ್ನು ಬಹಳ ಕೀಳಾಗಿ ಕಾಣುತ್ತಿದ್ದರು. ಅಬೂಜಹಲ್‌ನಿಗೆ ತನ್ನ ಕೊನೆಯ ಅಭಿಲಾಷೆಯನ್ನು ಸಹ ಈಡೇರಿಸಲು ಸಾಧ್ಯವಾಗಿರಲಿಲ್ಲ. ಒಬ್ಬ ಸರದಾರ ಯುದ್ಧದಲ್ಲಿ ಕೊಲ್ಲಲ್ಪಟ್ಟರೆ ಅವರ ತಲೆಯನ್ನು ಉದ್ದವಾಗಿ, ಎಂದರೆ, ಕತ್ತು ಸಹ ಸೇರಿಸಿ ಕಡಿಯಲಾಗುತ್ತಿತ್ತು. ಕೊಲ್ಲಲ್ಪಟ್ಟದ್ದು ಒಬ್ಬ ಸರದಾರ ಎಂದು ಗೊತ್ತಾಗುವಂತೆ ಆಗಲು ಹೀಗೆ ಮಾಡಲಾಗುತ್ತಿತ್ತು. ಗಾಯಗೊಂಡು, ನಿಶ್ಚಲನಾಗಿ ಬಿದ್ದಿರುವ ಅಬೂಜಹಲ್‌ನನ್ನು ಕಂಡ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಅವನೊಡನೆ 'ನಿನ್ನ ಸ್ಥಿತಿಯೇನು?' ಎಂದು ಕೇಳಿದರು. ಅಬುಜಹಲ್ ಹೇಳಿದನು: ನನ್ನನ್ನು ರೈತರ ಮಕ್ಕಳು ಕೊಂದುಹಾಕುತ್ತಿದ್ದಾರೆ ಎಂಬ ವಿಷಾದದ ಹೊರತು ನನಗೆ ಬೇರೆ ಯಾವುದೇ ದುಃಖವಿಲ್ಲ. ಮಕ್ಕದ ಜನರು ಇದನ್ನು ಕಡಿಮೆ ಅಂತಸ್ತಿನ ಕೆಲಸವನ್ನಾಗಿಭಾವಿಸುತ್ತಿದ್ದರು. ಮದೀನದ ಜನರಿಗೆ ಯುದ್ಧ ಮತ್ತು ಹೋರಾಟದ ಬಗ್ಗೆ ಏನೂ ಗೊತ್ತಿಲ್ಲ ಎಂದು ಭಾವಿಸುತ್ತಿದ್ದರು. ಆದರೆ ಅಬೂಜಹಲ್‌ನನ್ನು ಕೊಂದದ್ದು ಅದೇ ಮದೀನದ ಜನರಾಗಿದ್ದರು ಎಂದು ಮಾತ್ರವಲ್ಲ, ಯುದ್ಧದಲ್ಲಿ ಅಷ್ಟೇನೂ ಅನುಭವವಿಲ್ಲದ ಅವರ ಮಕ್ಕಳು ಅವನ ಆ ಅಹಂಕಾರವನ್ನು ಕೊನೆಗೊಳಿಸಿದ್ದರು. 'ನಿನಗೆ ಏನಾದರೂ ಅಭಿಲಾಷೆಯಿದೆಯೇ? ಎಂದು ಅಬ್ದುಲ್ಲಾಹ್ ಬಿನ್ ಮಸ್‌ಊದ್ ಅಬೂಜಹಲ್‌ನೊಡನೆ ಕೇಳಿದರು. ನನ್ನ ಕತ್ತನ್ನು ಉದ್ದವಾಗಿ ಕತ್ತರಿಸಬೇಕು ಎಂಬುವುದಾಗಿದೆ ನನ್ನ ಕೊನೆಯ ಆಶೆ ಎಂದು ಅವನು ಹೇಳಿದನು. ನಿನ್ನ ಈ ಅಭಿಲಾಷೆಯನ್ನು ಕೂಡ ನಾನು ಈಡೇರಿಸುವುದಿಲ್ಲ ಎಂದು ಹೇಳಿ ಅವನ ತಲೆಯನ್ನು ಮಾತ್ರ, ಕತ್ತು ಸೇರಿಸದೆ ಕಡಿದು ಹಾಕಿದರು. ಅವನು ಖುಶಿಯ ದಿನ ಎಂದು ಭಾವಿಸಿದ್ದು ಶೋಕದ ದಿನವಾಯಿತು. ಅವನ ಕುಡಿದಿದ್ದ ಶರಾಬು ದಹಿಸಲ್ಪಡುವ ಸಮಯ ಕೂಡ ಅವನಿಗೆ ಲಭಿಸಲಿಲ್ಲ.

(ಖುತ್‌ಬಾತೆ ಮಹ್ಮೂದ್ (ಖುತ್ಬ ಈದುಲ್ ಫಿತರ್), ಸಂಪುಟ–1, ಪುಟ–11)

ಬದ್ರ್ ಯುದ್ಧದ ವೇಳೆ ಹಝ್ರತ್ ಮುಅವ್ವಿಧ್(ರ) ಯುದ್ಧ ಮಾಡುತ್ತಾ ಹುತಾತ್ಮರಾದರು. ಅವರನ್ನು ಅಬೂ ಮುಸಾಫಹ್ ಶಹೀದ್ ಮಾಡಿದ್ದನು.

(ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಭಾಗ–4, ಪುಟ–1442, ದಾರುಲ್ ಜೀಲ್ ಬೈರೂತ್)

ಪ್ರಸ್ತಾಪಿಸಲಾಗುವ ಮುಂದಿನ ಸಹಾಬಿಯ ಹೆಸರು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್. ಹಝ್ರತ್ ಉಬಯ್ಯ್ ಅನ್ಸಾರಿನ ಗೋತ್ರವಾದ ಖಝ್ರಜಿನ ಶಾಖೆ ಬನೂ ಮುಆವಿಯಾದವರಾಗಿದ್ದರು. ಹಝ್ರತ್ ಉಬಯ್ಯ್‌ರ ತಂದೆಯ ಹೆಸರು ಕಅ್‌ಬ್ ಬಿನ್ ಖೈಸ್ ಮತ್ತು ತಾಯಿಯ ಹೆಸರು ಸುಹೈಲ ಬಿನ್ತ್ ಅಸ್ವದ್ ಎಂದಾಗಿತ್ತು. ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಗೆ ಎರಡು ಉಪನಾಮಗಳಿದ್ದುವು. ಒಂದು ಅಬೂಮುಂಝಿರ್ ಎಂದಾಗಿತ್ತು, ಅದನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇಟ್ಟಿದ್ದರು. ಎರಡನೆಯದ್ದು ಅಬೂತುಫೈಲ್ ಎಂದಾಗಿತ್ತು. ಅದನ್ನು ಅವರ ಮಗನ ಹೆಸರಿನ ಕಾರಣದಿಂದ ಹಝ್ರತ್ ಉಮರ್(ರ) ಇಟ್ಟಿದ್ದರು.

(ಅಸದುಲ್‌ಗಾಬ, ಸಂಪುಟ–1, ಪುಟ–168–169, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2016)

ಹಝ್ರತ್ ಉಬಯ್ಯ್ ಮಧ್ಯಮ ಎತ್ತರದ ವ್ಯಕ್ತಿಯಾಗಿದ್ದರು. ಹಝ್ರತ್ ಉಬಯ್ಯ್‌ರ ತಲೆ ಮತ್ತು ಗಡ್ಡದ ಬಣ್ಣ ಬಿಳಿಯಾಗಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–378, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017) ಅಂದರೆ ಗಡ್ಡ ಮತ್ತು ತಲೆಯ ಕೂದಲಿಗೆ ರಂಗು ಹಚ್ಚಿ ಅದರ ಬಣ್ಣವನ್ನು ಬದಲಾಯಿಸುತ್ತಿರಲಿಲ್ಲ. ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ)ಎಪ್ಪತ್ತು ವ್ಯಕ್ತಿಗಳೊಂದಿಗೆ ಬೈಅತ್ ಅಖಬ ಸಾನಿಯದಲ್ಲಿ ಸೇರಿದ್ದರು. ಹಝ್ರತ್ ಉಬಯ್ಯ್ ಇಸ್ಲಾಮಿನ ಆಗಮನಕ್ಕೆ ಮುಂಚೆಯೇ ಓದು ಬರಹ ತಿಳಿದಿರುವ ವ್ಯಕ್ತಿಯಾಗಿದ್ದರು. ಅವರಿಗೆ ಹಝ್ರತ್ ಪೈಗಂಬರರಿಗೆ(ಸ) ಅವತೀರ್ಣವಾಗುತ್ತಿದ್ದ ಪವಿತ್ರ ಖುರ್‌ಆನಿನ ವಚನಗಳನ್ನು ಬರೆಯುವ ಸೌಭಾಗ್ಯ ಸಹ ಲಭಿಸಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಬಯ್ಯ್ ಮತ್ತು ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್‌ರ ನಡುವೆ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಇನ್ನೊಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಬಯ್ಯ್ ಮತ್ತು ಹಝ್ರತ್ ಸಈದ್ ಬಿನ್ ಝೈದ್‌ರ ನಡುವೆ ಸಾಹೋದರ ಸಂಬಂಧವನ್ನು ಸ್ಥಾಪಿಸಿದ್ದರು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–378, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಉಬಯ್ಯ್‌ರಿಗೆ ಪವಿತ್ರ ಖುರ್‌ಆನ್ ವಚನಗಳನ್ನು ಪಾರಾಯಣ ಮಾಡಿಕೊಡಲು ಅಲ್ಲಾಹನು ಹಝ್ರತ್ ಪೈಗಂಬರರೊಡನೆ(ಸ) ಹೇಳಿದ್ದಾಗಿ ಅವರ ಬಗ್ಗೆ ವರದಿಯಲ್ಲಿ ಬಂದಿದೆ. 'ನನ್ನ ಉಮ್ಮತ್ತಿನ ಅತ್ಯಂತ ಶ್ರೇಷ್ಠ ಖಾರಿ ಪವಿತ್ರ ಖುರ್‌ಆನ್ ಉಚ್ಚಾರ ಶುದ್ಧಿಯೊಂದಿಗೆ ಓದುವ ವ್ಯಕ್ತಿ ಉಬಯ್ಯ್ ಆಗಿರುವರು ಎಂದು ಪೈಗಂಬರ್(ಸ) ಹೇಳಿದ್ದರು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–378, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಅವರಿಗೆ ಪವಿತ್ರ ಖುರ್‌ಆನಿನ ಬಗ್ಗೆ ಆಳವಾದ ಅರಿವಿತ್ತು ಎಂದು ವರದಿಗಳಲ್ಲಿ ಬಂದಿವೆ. ಇದರ ಬಗ್ಗೆ ಹೆಚ್ಚಿನ ವರದಿಗಳು ಮುಂದೆ ಬರುವುವು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಖಿರ್ರಾಯೇ ಉಮ್ಮತ್, ಎಂದರೆ, ಪವಿತ್ರ ಖುರ್‌ಆನ್ ಓದುವ ಈ ಸಮುದಾಯದ ಶ್ರೇಷ್ಠ ವ್ಯಕ್ತಿಗಳು ಎಂದು ಹೆಸರಿಸಿದ ನಾಲ್ಕು ವ್ಯಕ್ತಿಗಳಲ್ಲಿ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್ ಸೇರಿದ್ದರು. ಯಾರಾದರೂ ಪವಿತ್ರ ಖುರ್‌ಆನ್ ಕಲಿಯಲು ಇಚ್ಛಿಸುವರಾದರೆ ಅವರಿಂದ ಕಲಿಯಲಿ ಎಂದೂ ಹೇಳಿದ್ದರು. (ತಫ್‌ಸೀರೆ ಕಬೀರ್, ಸಂಪುಟ–10, ಪುಟ–84)

ಹಝ್ರತ್ ಪೈಗಂಬರ್(ಸ) ಯಾರಿಂದ ಪವಿತ್ರ ಖುರ್‌ಆನ್ ಬರೆಸುತ್ತಿದ್ದರೋ ಅವರಲ್ಲಿ ಈ ಹದಿನೈದು ವ್ಯಕ್ತಿಗಳು ಸೇರಿದ್ದರು ಎಂದು ಚರಿತ್ರೆಯಿಂದ ಸಾಬೀತಾಗುತ್ತದೆ. ಝೈದ್ ಬಿನ್ ಸಾಬಿತ್, ಉಬಯ್ಯ್ ಬಿನ್ ಕಅ್‌ಬ್, ಅಬ್ದುಲ್ಲಾಹ್ ಬಿನ್ ಸಅದ್, ಅಬೀ ಸರಹ್, ಝುಬೇರ್ ಬಿನ್ ಅಲ್‌ಅವಾಮ್, ಖಾಲಿದ್ ಬಿನ್ ಸಈದ್ ಬಿನ್ ಆಸ್, ಅವಾನ್ ಬಿನ್ ಸಈದುಲ್ ಆಸ್, ಹಂಝುಲ ಬಿನ್ ಅರ್‌ರಬೀಉಲ್ ಅಸದಿ, ಮುಐಖಿಬ್ ಬಿನ್ ಅಬೀ ಫಾತಿಮಾ, ಅಬ್ದುಲ್ಲಾಹ್ ಬಿನ್ ಅರ್ಕಮ್ ಝುಹ್‌ರೀ, ಶರ್‌ಜೀಲ್ ಬಿನ್ ಹಸನ, ಅಬ್ದುಲ್ಲಾಹ್ ಬಿನ್ ರವಾಹ, ಹಝ್ರತ್ ಅಬೂಬಕ್ಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಹಝ್ರತ್ ಅಲಿ. ಹಝ್ರತ್ ಪೈಗಂಬರರಿಗೆ(ಸ) ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣವಾಗುವಾಗ ಪೈಗಂಬರ್(ಸ) ಇವರಲ್ಲಿ ಯಾರನ್ನಾದರೂ ಕರೆದು ಬರೆಸುತ್ತಿದ್ದರು.

(ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–425–426)

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಕಡೆ ಹೀಗೆ ಬರೆದಿರುವರು: ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್‌ಆನ್ ಕಲಿಸಲು ಅಧ್ಯಾಪಕರ ಒಂದು ಸಂಘವನ್ನು ನಿಶ್ಚಯಿಸಿದ್ದರು. ಅವರು ಪವಿತ್ರ ಖುರ್‌ಆನಿನಿಂದ ಭಾಗಗಳನ್ನು ಕಂಠಪಾಠ ಮಾಡಿ ಜನರಿಗೆ ಕಲಿಸುತ್ತಿದ್ದರು. ಹಝ್ರತ್ ಪೈಗಂಬರರಿಂದ(ಸ) ಪವಿತ್ರ ಖುರ್‌ಆನನ್ನು ಕಲಿತುಕೊಂಡು ಇತರರಿಗೆ ಕಲಿಸುವುದು ನಾಲ್ಕು ಶ್ರೇಷ್ಠ ಅಧ್ಯಾಪಕರನ್ನು ಒಳಗೊಂಡ ಈ ಸಂಘದ ಕೆಲಸವಾಗಿತ್ತು. ಎಂದರೆ ಇವರ ಕೆಳಗೆ ಹಲವು ಸಹಾಬಿಯರು ಇದ್ದರು. ಅವರು ಮುಂದೆ ಜನರಿಗೆ ಕಲಿಸುತ್ತಿದ್ದರು. ಈ ನಾಲ್ಕು ಶ್ರೇಷ್ಠ ಅಧ್ಯಾಪಕರ ಹೆಸರು ಈ ರೀತಿಯಿದೆ: ಅಬ್ದುಲ್ಲಾಹ್ ಬಿನ್ ಮಸ್‌ಊದ್, ಸಾಲಿಂ ಮೌಲಾ ಅಬೀ ಹುದೈಫ, ಮಆಧ್ ಬಿನ್ ಜಬಲ್, ಉಬಯ್ಯ್ ಬಿನ್ ಕಅ್‌ಬ್. ಇವರಲ್ಲಿ ಮೊದಲಿನ ಇಬ್ಬರು ವ್ಯಕ್ತಿಗಳು ಮುಹಾಜಿರ್‌ಗಳಾಗಿದ್ದರು. ನಂತರದ ಇಬ್ಬರು ವ್ಯಕ್ತಿಗಳು ಅನ್ಸಾರ್‌ಗಳಾಗಿದ್ದರು. ಅಬ್ದುಲ್ಲಾಹ್ ಬಿನ್ ಮಸ್‌ಊದ್ ಒಬ್ಬ ಕಾರ್ಮಿಕರಾಗಿದ್ದರು, ಮಸ್‌ಊದ್ ಸ್ವತಂತ್ರಗೊಂಡ ಒಬ್ಬ ಗುಲಾಮರಾಗಿದ್ದರು, ಮುಆಧ್ ಬಿನ್ ಜಬಲ್ ಮತ್ತು ಉಬಯ್ಯ್ ಬಿನ್ ಕಅಬ್ ಮದೀನದ ಸರದಾರರಲ್ಲಿ ಸೇರಿದವರಾಗಿದ್ದರು. ಹೀಗೆ ಹಝ್ರತ್ ಪೈಗಂಬರ್(ಸ) ಹಲವು ಗುಂಪುಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಖಾರಿಗಳನ್ನು, ಪವಿತ್ರ ಖುರ್‌ಆನ್ ಓದಿಸುವ ಅಧ್ಯಾಪಕರನ್ನು ನಿಶ್ಚಯಿಸಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹದೀಸಿನಲ್ಲಿ ಹೀಗೆ ಬಂದಿದೆ: **ಖುಧುಲ್ ಖುರ್‌ಆನ ಮಿನ್ ಅರ್‌ಬಅತಿ ಅಬ್ದುಲ್ಲಾಹ್ ಬಿನ್ ಮಸ್‌ಊದ್ ವ ಸಾಲಿಮ್ ವ ಮುಆಧ್ ಇಬ್ನು ಜಬಲ್ ವ ಉಬಯ್ಯ್ ಬಿನ್ ಕಅ್‌ಬ್**. ಪವಿತ್ರ ಖುರ್‌ಆನ್ ಕಲಿಯಲು ಇಚ್ಛಿಸುವವರು ಈ ನಾಲ್ಕು ಜನರಿಂದ ಪವಿತ್ರ ಖುರ್‌ಆನ್ ಕಲಿಯಲಿ. ಅಬ್ದುಲ್ಲಾಹ್ ಬಿನ್ ಮಸ್‌ಊದ್, ಸಾಲಿಮ್, ಮುಆಧ್ ಇಬ್ನು ಜಬಲ್ ಮತ್ತು ಉಬಯ್ಯ್ ಬಿನ್ ಕಅ್‌ಬ್. ಸಂಪೂರ್ಣ ಪವಿತ್ರ ಖುರ್‌ಆನನ್ನು ಈ ನಾಲ್ಕು ವ್ಯಕ್ತಿಗಳು ಹಝ್ರತ್ ಪೈಗಂಬರರಿಂದ(ಸ) ಕಲಿತಿದ್ದರು. ಇವರು ಪೈಗಂಬರಿಗೆ(ಸ) ಅವರು ಕಲಿತ ಭಾಗವನ್ನು ಹೇಳಿಕೊಂಡು ಅದನ್ನು ಸರಿಪಡಿಸುತ್ತಿದ್ದರು. ಇವರಲ್ಲದೆ ಪೈಗಂಬರ್‌ರಿಂದ ಇತರ ಹಲವು ಸಹಾಬಿಯರು ಸಹ ನೇರವಾಗಿ ಪವಿತ್ರ ಖುರ್‌ಆನಿನ ಹಲವು ಭಾಗಗಳನ್ನು ಕಲಿಯುತ್ತಿದ್ದರು.

(ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರು;ಲ್ ಉಲೂಮ್, ಸಂಪುಟ–20, ಪುಟ–427–428)

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಉಬಯ್ಯ್‌ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು – ನಿನಗೆ ನಾನು ಸೂರಃ **ಲಮ್‌ಯಕುನಿಲ್ಲಧೀನ ಕಫರೂ ಮಿನ್ ಅಹ್‌ಲಿಲ್ ಕಿತಾಬಿ** ಓದಿ ಹೇಳಬೇಕೆಂದು ಅಲ್ಲಾಹನು ನನ್ನನ್ನು ಆಜ್ಞಾಪಿಸಿದ್ದಾನೆ. 'ನನ್ನ ಹೆಸರು ಹೇಳಿ ಅಲ್ಲಾಹನು ಆಜ್ಞಾಪಿಸಿದ್ದಾನೆಯೇ? ಎಂದು ಹಝ್ರತ್ ಉಬಯ್ಯ್(ರ) ಕೇಳಿದರು. ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಇದನ್ನು

ಕೇಳಿ ಹಝ್ರತ್ ಉಬಯ್ಯ್ ಅತ್ತುಬಿಟ್ಟರು. ಇದು ಬುಖಾರಿಯ ವರದಿಯಾಗಿದೆ. (ಸಹೀಹ್ ಬುಖಾರಿ, ಕಿತಾಬ್ ಮನಾಖಿಬುಲ್ ಅನ್ಸಾರ್, ಹದೀಸ್-3809)

ಮತ್ತೊಂದರಲ್ಲಿ ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ನಿನಗೆ ಪವಿತ್ರ ಖುರ್‌ಆನ್ ಓದಿ ಹೇಳಲು ಅಲ್ಲಾಹನು ನನ್ನನ್ನು ಆಜ್ಞಾಪಿಸಿದ್ದಾನೆ. 'ಅಲ್ಲಾಹನು ನನ್ನ ಹೆಸರನ್ನು ತೆಗೆದು ಹೇಳಿದನೇ ಎಂದು ಹಝ್ರತ್ ಉಬಯ್ಯ್ ಕೇಳಿದರು. ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಎರಡೂ ಲೋಕಗಳ ಪರಿಪಾಲಕನ ಬಳಿಯಲ್ಲಿ ನನ್ನ ಪ್ರಸ್ತಾಪವಾಯಿತೇ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆಗ ಹಝ್ರತ್ ಉಬಯ್ಯ್‌ರಿಗೆ ಕಣ್ಣೀರು ಬಂತು. (ಸಹೀಹ್ ಬುಖಾರಿ, ಕಿತಾಬುತ್ತಫ್‌ಸೀರ್, ಹದೀಸ್-4961)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನದಾದ ಶೈಲಿಯಲ್ಲಿ ಹೀಗೆ ವಿವರಿಸಿದ್ದಾರೆ: ಅಬೂ ಹಯಬದ್ರಿರಿಂದ ಹೀಗೆ ವರದಿಯಾಗಿದೆ – **ಸೂರಃ ಲಮ್ ಯಕುನ್** ಒಂದೇ ಬಾರಿಗೆ ಅವತೀರ್ಣವಾದ ಸೂರತ್ತಾಗಿದೆ. ಇದು ಪೂರ್ತಿಯಾಗಿ ಅವತೀರ್ಣವಾದಾಗ, ಜಿಬ್ರೀಲ್ ಪೈಗಂಬರರೊಡನೆ ಹೇಳಿದರು: ಈ ಸೂರತ್ತನ್ನು ಉಬಯ್ಯ್ ಬಿನ್ ಕಅ್‌ಬ್‌ರಿಗೆ ಕಂಠಪಾಠ ಮಾಡಿಸಿಕೊಡಲು ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸಿದ್ದಾನೆ. ಆಗ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ಜಿಬ್ರೀಲ್ ನನ್ನೊಡನೆ ಆಜ್ಞಾಪಿಸಿದ್ದಾರೆ, ಎಂದರೆ ಈ ಸೂರತನ್ನು ನಿನಗೆ ಕಂಠಪಾಠ ಮಾಡಿಸಿ ಕೊಡಬೇಕೆಂಬ ಅಲ್ಲಾಹನ ಆದೇಶವನ್ನು ನನಗೆ ತಲುಪಿಸಿದ್ದಾರೆ. ಉಬಯ್ಯ್ ಬಿನ್ ಕಅ್‌ಬ್ ಕೇಳಿದರು: ಯಾ ರಸೂಲಲ್ಲಾಹ್, ನನ್ನ ಪ್ರಸ್ತಾಪ ಸಹ ಅಲ್ಲಾಹನ ಸನ್ನಿಧಿಯಲ್ಲಿ ಆಗಿತ್ತೇ? ಹೌದೆಂದು ಪೈಗಂಬರ್(ಸ) ಹೇಳಿದರು. ಇದನ್ನು ಕೇಳಿ ಉಬಯ್ಯ್ ಬಿನ್ ಕಅ್‌ಬ್(ರ) ಅತಿಯಾದ ಸಂತೋಷದಿಂದ ಅತ್ತುಬಿಟ್ಟರು. (ತಫ್‌ಸೀರೆ ಕಬೀರ್, ಸಂಪುಟ-8, ಪುಟ-342)

ಹಝ್ರತ್ ಪೈಗಂಬರರ(ಸ) ಮರಣದ ನಂತರ ಹಝ್ರತ್ ಉಮರ್ ಫಾರೂಖ್(ರ) ಈ ಘಟನೆಯನ್ನು ಹಲವು ಬಾರಿ ಹೇಳುತ್ತಿದ್ದರು. ಒಂದು ಸಲ ಮಸ್ಜಿದ್ ನಬವಿಯ ಮಿಂಬರ್‌ನಲ್ಲಿ ನಿಂತು ಅವರು ಹೇಳಿದರು: ಅತ್ಯಂತ ಶ್ರೇಷ್ಠ ಖಾರಿ ಉಬಯ್ಯ್ ಆಗಿರುವರು. ಸಿರಿಯಾದ ಪ್ರಸಿದ್ಧ ಯಾತ್ರೆಯಲ್ಲಿ ಡಮಸ್ಕಸಿನ ಪ್ರದೇಶದ ಒಂದು ಗ್ರಾಮವಾದ ಜಾಬಿಯಾಗೆ ಹೋದಾಗ, ಒಂದು ಖುತ್‌ಬದಲ್ಲಿ ಹಝ್ರತ್ ಉಮರ್(ರ) ಹೇಳಿದರು: **ಮನ್ ಅರಾದಲ್ ಖುರ್‌ಆನ ಫಲ್‌ಯಅ್‌ತಿ ಉಬಯ್ಯ.** ಎಂದರೆ, ಪವಿತ್ರ ಖುರ್‌ಆನ್ ಓದಲು ಆಸಕ್ತಿಯಿರುವವರು ಅಬಿಉಬಯ್ಯರ ಬಳಿಗೆ ಹೋಗಲಿ. (ಸ್ಯೆರುಸ್ಸಹಾಬ, ಸಂಪುಟ-3, ಪುಟ-149, ದಆರುಲ್ ಇಶಾಅತ್ ಉರ್ದು ಬಜಾರ್ ಕರಾಚಿ) (ಮುಜಮುಲ್ ಬಲದಾನ್, ಸಂಪುಟ-2, ಪುಟ-91)

ಹಝ್ರತ್ ಅನಸ್‌ರಿಂದ(ರ) ಹೀಗೆ ವರದಿಯಾಗಿದೆ: ನಾಲ್ಕು ವ್ಯಕ್ತಿಗಳು ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಸಂಪೂರ್ಣ ಪವಿತ್ರ ಖುರ್‌ಆನನ್ನು ಕಂಠಪಾಠ ಮಾಡಿದ್ದರು. ಇವರೆಲ್ಲರೂ ಅನ್ಸಾರಿಗಳಾಗಿದ್ದರು. ಅವರ ಹೆಸರುಗಳು ಹೀಗಿವೆ – ಹಝ್ರತ್ ಉಬಯ್ಯ್ ಬಿನ್ ಕಅ್‌ಬ್, ಹಝ್ರತ್ ಮುಆಝ್ ಬಿನ್ ಜಬಲ್, ಹಝ್ರತ್ ಅಬೂಝೈದ್ ಮತ್ತು ಹಝ್ರತ್ ಝೈದ್ ಬಿನ್ ಸಾಬಿತ್. ಇದು ಬುಖಾರಿಯ ಹದೀಸಾಗಿದೆ. (ಸಹೀಹ್ ಬುಖಾರಿ, ಕಿತಾಬ್ ಮನಾಖಿಬುಲ್ ಅನ್ಸಾರ್, ಹದೀಸ್-3810, ಅನುವಾದ ಸಂಪುಟ-7, ಪುಟ-290, ನಝಾರತ್ ಇಶಾಅತ್ ರಬ್ವಾಹ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅನ್ಸಾರರಲ್ಲಿ ಪ್ರಸಿದ್ಧವಾದ ಹಾಫಿಝ್‌ಗಳ ಹೆಸರುಗಳು ಹೀಗಿವೆ: ಉಬಾದ ಬಿನ್ ಸಾಮಿತ್, ಮುಆಧ್ ಮಜ್‌ಮಅ್ ಬಿನ್ ಹಾರಿಸ, ಫಝಾಲ ಬಿನ್ ಉಬೈದ್, ಮುಸಲ್ಲಮ ಬಿನ್ ಮುಖಲ್ಲದ್, ಅಬೂದರ್‌ದ, ಝೈದ್ ಬಿನ್ ಸಾಬಿತ್, ಉಬಯ್ಯ್ ಬಿನ್ ಕಅ್‌ಬ್, ಸಅದ್ ಬಿನ್ ಉಬಾದ ಮತ್ತು ಉಮ್ಮೆ ವರ್‌ಖ.
(ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-430)

ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಉಮ್ಮತ್ತಿನ ಅತ್ಯಂತ ಕರುಣಾಳು ವ್ಯಕ್ತಿ ಹಝ್ರತ್ ಅಬೂಬಕ್ಕರ್ ಆಗಿದ್ದಾರೆ. ಅಲ್ಲಾಹನ ದೀನಿನ ವಿಷಯದಲ್ಲಿ ಅತ್ಯಂತ ಕಠಿಣ, ಹಝ್ರತ್ ಉಮರ್(ರ) ಆಗಿರುವರು. ಎಂದರೆ ಅವರು ಇಸ್ಲಾಮಿನ ತತ್ವಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು, ಲಜ್ಜೆಯ ವಿಷಯದಲ್ಲಿ ಅತ್ಯಂತ ಪರಿಪೂರ್ಣತೆ ಹೊಂದಿದ್ದವರು ಹಝ್ರತ್ ಉಸ್ಮಾನ್ ಆಗಿರುವರು. ಎಂದರೆ ಲಜ್ಜೆಯ ಉನ್ನತ ಮಟ್ಟವನ್ನು ಅವರು ತಲುಪಿದ್ದರು. ಹರಾಂ ಮತ್ತು ಹಲಾಲಿನ ಬಗ್ಗೆ ಅತ್ಯಂತ ಹೆಚ್ಚು ಅರಿತವರು ಹಝ್ರತ್ ಮುಆಧ್ ಬಿನ್ ಜಬಲ್ ಆಗಿರುವರು, ಕಡ್ಡಾಯ ಸಂಗತಿಗಳ ಬಗ್ಗೆ ಅತ್ಯಂತ ಹೆಚ್ಚು ತಿಳಿದವರು ಹಝ್ರತ್ ಝೈದ್ ಬಿನ್ ಸಾಬಿತ್ ಆಗಿರುವರು, ಪವಿತ್ರ ಖುರ್‌ಆನಿನ ಪಾರಾಯಣದ ಬಗ್ಗೆ ಅತ್ಯಂತ ಹೆಚ್ಚಾಗಿ ತಿಳಿದ ವ್ಯಕ್ತಿ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್ ಆಗಿರುವರು ಮತ್ತು ಪ್ರತಿಯೊಂದು ಉಮ್ಮತಿಗೆ ಒಬ್ಬ ಅಮೀನ್ ಇರುತ್ತಾರೆ, ನನ್ನ ಉಮ್ಮತ್ತಿನ ಅಮೀನ್ ಹಝ್ರತ್ ಅಬೂ ಉಬೈದ ಬಿನ್ ಜರಾಹ್ ಆಗಿರುವರು. (ಜಾಮಿ ತಿರ್‌ಮಿಝಿ, ಅಬ್ವಾಬುಲ್ ಮನಾಖಿಬ್, ಹದೀಸ್-3790) ಹಝ್ರತ್ ಅಬೂ ಉಬೈದರ(ರ) ಪ್ರಸ್ತಾಪ ಹಿಂದೆ ಸಹ ಆಗಿದೆ.

ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಬಂದಾಗ, ಮೊಟ್ಟಮೊದಲು ಪೈಗಂಬರರ(ಸ) ವಹಿಗಳನ್ನು ಬರೆದವರು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್ ಆಗಿದ್ದರು. ಆ ಕಾಲದಲ್ಲಿ ಯಾವುದೇ ಗ್ರಂಥ ಅಥವಾ ಪವಿತ್ರ ಖುರ್‌ಆನಿನ ಕೊನೆಯಲ್ಲಿ ಬರಹಗಾರನ ಹೆಸರು ಬರೆಯುವ ಸಂಪ್ರದಾಯವಿರಲಿಲ್ಲ. ಮೊಟ್ಟಮೊದಲು ಹಝ್ರತ್ ಉಬಯ್ಯ್ ಈ ರೂಢಿಯನ್ನು ಪ್ರಾರಂಭಿಸಿದ್ದರು. ಅನಂತರ ಇತರ ಹಿರಿಯರು ಸಹ ಈ ರೀತಿಯನ್ನು ಅನುಕರಿಸಿದರು.
(ಅಸದುಲ್‌ಗಾಬ, ಸಂಪುಟ-1, ಪುಟ-170, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016) (ಸ್ಯೆರುಸ್ಸಹಾಬ, ಸಂಪುಟ-3, ಪುಟ-158, ದಾರುಲ್ ಇಶಾಅತ್ ಉರ್ದು ಬಜಾರ್ ಕರಾಚಿ)

ಅಂದರೆ ಹೀಗೆ ಬರಹಗಾರನ ಹೆಸರು ಬರೆಯುವ ರೀತಿ ರೂಢಿಗೆ ಬಂದಿತ್ತು.

ಪವಿತ್ರ ಖುರ್‌ಆನಿನ ಪ್ರತಿಯೊಂದು ಅಕ್ಷರ ಹಝ್ರತ್ ಪೈಗಂಬರರ(ಸ) ನಾಲಗೆಯಿಂದ ಕೇಳಿ ಹಝ್ರತ್ ಉಬಯ್ಯ್(ರ) ಕಂಠಪಾಠ ಮಾಡಿದ್ದರು. ಹಝ್ರತ್ ಪೈಗಂಬರರು(ಸ) ಸಹ ಹಝ್ರತ್ ಉಬಯ್ಯ್‌ರ ಆಸಕ್ತಿಯನ್ನು ನೋಡಿ ಅವರ ಕಲಿಕೆಯ ಕಡೆಗೆ ವಿಶೇಷವಾದ ಗಮನಹರಿಸುತ್ತಿದ್ದರು. ನುಬುವ್ವತ್ತಿನ ಪ್ರತಾಪ ದೊಡ್ಡ ದೊಡ್ಡ ಸಹಾಬಿಯರನ್ನು ಸಹ ಹಝ್ರತ್ ಪೈಗಂಬರ್‌ರೊಡನೆ(ಸ) ಸವಾಲು ಕೇಳುವುದರಿಂದ ತಡೆಯುತ್ತಿತ್ತು. ಆದರೆ, ಹಝ್ರತ್ ಉಬಯ್ಯ್(ರ) ಯಾವುದೇ ಹಿಂಜರಿಕೆಯಿಲ್ಲದೆ ಹಝ್ರತ್ ಪೈಗಂಬರರೊಡನೆ(ಸ) ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರು ಅಸಂಬದ್ಧ ಸವಾಲುಗಳನ್ನು ಕೇಳುತ್ತಿದ್ದರು ಎಂದಲ್ಲ. ಪ್ರವಾದಿತ್ವದ ವೈಭವ ಮತ್ತು ಸ್ಥಾನವನ್ನು ಅರಿತು, ಅದನ್ನು ಗಮನದಲ್ಲಿರಿಸಿಕೊಂಡು ಸವಾಲು ಕೇಳುವ ಸರಿಯಾದ ರೀತಿಯಲ್ಲಿ ಸವಾಲುಗಳನ್ನು ಕೇಳುತ್ತಿದ್ದರು. ಆದರೆ ಪ್ರಶ್ನೆಗಳನ್ನು ಕೇಳುವುದರಲ್ಲಿ ಅವರಿಗೆ ಹಿಂಜರಿಕೆ ಇದ್ದಿರಲಿಲ್ಲ. ಹಝ್ರತ್ ಪೈಗಂಬರರು(ಸ) ಸಹ ಹಝ್ರತ್ ಉಬಯ್ಯ್‌ರ(ರ) ಆಸಕ್ತಿಯನ್ನು ನೋಡಿ ಅವರ ಮನಸ್ಸಿನಲ್ಲಿರಬಹುದಾದ ಸಂಶಯಗಳಿಗೆ ಉತ್ತರಗಳನ್ನು ಕೊಡುತ್ತಿದ್ದರು. ಪ್ರಶ್ನೆಯಾಗಿ ಕೇಳುವುದಕ್ಕೆ ಮುಂಚೆಯೇ ಕೆಲವು ಸಲ ಉತ್ತರಕೊಡುತ್ತಿದ್ದರು. (ಸ್ಯೆರುಸ್ಸಹಾಬ, ಸಂಪುಟ-3, ಪುಟ-148, ದಾರುಲ್ ಇಶಾಅತ್ ಉರ್ದು ಬಜಾರ್ ಕರಾಚಿ)

ಒಂದು ಸಲ ಹಝ್ರತ್ ಪೈಗಂಬರ್(ಸ) ಫಜ್ರ್ ನಮಾಝಿನ ಇಮಾಮತ್ ವಹಿಸಿದ್ದರು. ಅದರಲ್ಲಿ ಒಂದು ಆಯತ್ತನ್ನು ಓದಲು ಮರೆತುಬಿಟ್ಟರು. ಹಝ್ರತ್ ಉಬಯ್ಯ್(ರ) ನಮಾಝಿನ ಆರಂಭದಲ್ಲಿ ಇದ್ದಿರಲಿಲ್ಲ. ನಮಾಝ್ ಶುರುವಾದ ಸ್ವಲ್ಪ ಸಮಯದ ನಂತರ ನಮಾಝಿನಲ್ಲಿ ಸೇರಿದ್ದರು. ನಮಾಝ್ ಕೊನೆಗೊಳಿಸಿದ ನಂತರ ಹಝ್ರತ್ ಪೈಗಂಬರ್(ಸ) ಜನರೊಡನೆ ಕೇಳಿದರು: ಯಾರಾದರೂ ನನ್ನ ಖಿರಅತ್, ಎಂದರೆ, ಪವಿತ್ರ ಖುರ್‌ಆನಿನ ಪಾರಾಯಣದ ಬಗ್ಗೆ ಯಾರಾದರೂ ಗಮನಸಿದ್ದೀರಾ? ಎಲ್ಲರೂ ಮೌನವಾಗಿದ್ದರು. ಅನಂತರ ಉಬಯ್ಯ್ ಬಿನ್ ಕಅ್‌ಬ್ ಎಲ್ಲಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಅಷ್ಟರಲ್ಲಿ, ಹಝ್ರತ್ ಉಬಯ್ಯ್(ರ) ತನ್ನ ಬಾಕಿಯಾದ ರಕಅತನ್ನು ನಿರ್ವಹಿಸಿ ನಮಾಝ್ ಮುಗಿಸಿದ್ದರು. ಹಝ್ರತ್ ಪೈಗಂಬರ್(ಸ) ಪಾರಾಯಣ ಮಾಡುವಾಗ ಒಂದು ಆಯತ್ ಓದಲು ಬಿಟ್ಟುಹೋದದ್ದು ಬಹುಶಃ ಎರಡನೇ ರಕಅತಿನಲ್ಲಿ ಆಗಿರಬಹುದು. ಆದ್ದರಿಂದ ಅದನ್ನು ಹಝ್ರತ್ ಉಬಯ್ಯ್(ರ) ಕೇಳಿರಬಹುದು. ಹೇಗಿದ್ದರೂ, ತನ್ನ ನಮಾಝ್ ಮುಗಿಸಿದ ನಂತರ ಹಝ್ರತ್ ಉಬಯ್ಯ್(ರ) ಕೇಳಿದರು: ಯಾ ರಸೂಲಲ್ಲಾಹ್, ನೀವು ಇಂತಿಂತಹ ಆಯತನ್ನು ಓದಿರಲಿಲ್ಲ, ಅದು ರದ್ದು ಆಯಿತೇ ಅಥವಾ ನೀವು ಓದಲು ಮರೆತುಬಿಟ್ಟರೆ? ಹಝ್ರತ್ ಪೈಗಂಬರ್(ಸ) ಹೇಳಿದರು: ರದ್ದಾಗಿಲ್ಲ, ನಾನು ಅದನ್ನು ಓದಲು ಮರೆತುಬಿಟ್ಟೆ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಬಯ್ಯ್‌ರನ್ನು(ರ) ಸಂಬೋಧಿಸಿ ಹೇಳಿದರು: ನಿನಗಲ್ಲದೆ, ಬೇರೆ ಯಾರಿಗೂ ಇದರ ಕಡೆಗೆ ಗಮನ ಹೋಗಲಿಕ್ಕಿಲ್ಲ ಎಂದು ನನಗೆ ಗೊತ್ತಿತ್ತು. (ಸ್ಯೆರುಸ್ಸಹಾಬ, ಸಂಪುಟ-3, ಪುಟ-148, ದಾರುಲ್ ಇಶಾಅತ್ ಉರ್ದು ಬಜಾರ್ ಕರಾಚಿ)

ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ವರದಿ ಮಾಡುತ್ತಾರೆ: ನಾನು ಮಸೀದಿಯಲ್ಲಿ ಇದ್ದೆ. ಒಬ್ಬ ವ್ಯಕ್ತಿ ಒಳಗೆ ಬಂದು ನಮಾಝ್ ನಿರ್ವಹಿಸಲು ತೊಡಗಿದರು. ಅನಂತರ ಅವರು ಖಿರತ್ ಮಾಡಲು, ಎಂದರೆ, ಸೂರತನ್ನು ಓದಲು ಶುರುಮಾಡಿದರು. ಅವರ ಪಾರಾಯಣ ಶೈಲಿ ಸರಿಯಲ್ಲವೆಂದು ನನಗೆ ತೋರುತ್ತಿತ್ತು. ಅನಂತರ ಇನ್ನೊಬ್ಬ ವ್ಯಕ್ತಿ ಬಂದರು. ಅವರು ಬೇರೊಂದು ಶೈಲಿಯಲ್ಲಿ ಪವಿತ್ರ ಖುರ್‌ಆನ್ ಓದಿದರು. ನಾವೆಲ್ಲರೂ ನಮಾಝ್ ಮುಗಿಸಿದ ನಂತರ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದೆವು. ನಾನು

ಹೇಳಿದೆ: ಈ ವ್ಯಕ್ತಿ ಇಂತಿಂತಹ ಶೈಲಿಯಲ್ಲಿ ಪವಿತ್ರ ಖುರ್‌ಆನ್ ಪಾರಾಯಣ ಮಾಡಿದ್ದಾರೆ, ಅದು ನನಗೆ ಅಸಹಜವೆಂದು ತೋರುತ್ತಿತ್ತು. ಇನ್ನೊಬ್ಬ ವ್ಯಕ್ತಿ ಸಹ ಬಂದಿದ್ದರು. ಅವರು ಕೂಡ ಮತ್ತೊಂದು ರೀತಿಯಲ್ಲಿ ತಿಲಾವತ್ ಮಾಡಿದ್ದರು. ಅವರಿಬ್ಬರೊಡನೆ ಪವಿತ್ರ ಖುರ್‌ಆನ್ ಪಾರಾಯಣ ಮಾಡಲು ಹಝ್ರತ್ ಪೈಗಂಬರ್(ಸ) ಹೇಳಿದರು. ಅವರಿಬ್ಬರೂ ತಿಲಾವತ್ ಮಾಡಿದರು. ಅವರ ಇಬ್ಬರ ತಿಲಾವತ್ ಶೈಲಿ ಸರಿಯಾಗಿಯೇ ಇದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅವರಿಬ್ಬರ ತಿಲಾವತ್ ಶೈಲಿ ಸರಿಯಲ್ಲವೆಂದು ಹೇಳಿದ್ದ ನನ್ನ ಅಭಿಪ್ರಾಯವನ್ನು ರದ್ದುಗೊಳಿಸಿ, ಅವರ ತಿಲಾವತಿನಲ್ಲಿ ತಪ್ಪೇನಿಲ್ಲ ಎಂದು ಹೇಳಿದಾಗ, ನಾನು ಲಜ್ಜಿತನಾದೆನು, ಜಾಹಿಲಿಯಾ ಕಾಲದಲ್ಲೂ ಇಷ್ಟು ನಾಚಿಕೆಗೇಡಿನ ಅನುಭವ ನನಗೆ ಉಂಟಾಗಿರಲಿಲ್ಲ. ಜೀವಿತದಲ್ಲಿ ಎಂದೂ ಇಷ್ಟು ಮುಜುಗರದ ಸನ್ನವೇಶ ಉಂಟಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ನನ್ನ ಈ ನಾಚಿ ನೀರಾದ ಸ್ಥಿತಿಯನ್ನು ಕಂಡಾಗ, ಅವರು ನನ್ನ ಎದೆಯ ಮೇಲೆ ಕೈಯಿಟ್ಟರು. ನಾನು ಬೆವರಿನಿಂದ ಒದ್ದೆಯಾಗಿದ್ದೆ, ಭಯದ ಅವಸ್ಥೆಯಲ್ಲಿ ಅಲ್ಲಾಹನನ್ನು ಕಾಣುತ್ತಿದ್ದೇನೆ ಎಂಬಂತೆ ನಾನಾಗಿದ್ದೆ. ಆಗ ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳಿದರು: ಹೇ ಉಬಯ್ಯ್, ಪವಿತ್ರ ಖುರ್‌ಆನನ್ನು ಒಂದೇ ಖಿರಅತ್ ಅಥವಾ ಶೈಲಿಯಲ್ಲಿ ಓದಲು ನನಗೆ ಸಂದೇಶ ಕಳುಹಿಸಲಾಗಿತ್ತು. ನನ್ನ ಸಮುದಾಯಕ್ಕೆ ಅನುಕೂಲತೆ ಮಾಡಿಕೊಡಲು ನಾನು ಹೇಳಿದ್ದೆ. ಆಗ ಅಲ್ಲಾಹನು ಪವಿತ್ರ ಖುರ್‌ಆನನ್ನು ಎರಡು ಶೈಲಿಗಳಲ್ಲಿ ಓದಲು ಹೇಳಿದನು. ನನ್ನ ಸಮುದಾಯಕ್ಕೆ ಸೌಲಭ್ಯ ಉಂಟುಮಾಡಿಕೊಡಲು ನಾನು ಪುನಃ ಕೇಳಿಕೊಂಡೆನು. ಅನಂತರ ಮೂರನೇ ಬಾರಿ ಅಲ್ಲಾಹನು ಏಳು ಶೈಲಿಗಳಲ್ಲಿ ಓದಲು ಅನುಮತಿ ಕೊಟ್ಟನು ಹಾಗೂ ಅಲ್ಲಾಹನು ಉತ್ತರ ಹೇಳಿಕೊಟ್ಟ ನನ್ನ ಪ್ರತಿ ಪ್ರಶ್ನೆಗಳ ಬದಲಾಗಿ ಒಂದೊಂದು ಪ್ರಾರ್ಥನೆ ಮಾಡುವ ಹಕ್ಕನ್ನು ನನಗೆ ಕೊಡಲಾಯಿತು. ಆಗ ನಾನು ನನ್ನ ಉಮ್ಮತ್ತನ್ನು ಕ್ಷಮಿಸಲು ಎರಡು ಸಲ ಪ್ರಾರ್ಥಿಸಿದೆ. ಮೂರನೇ ದುಆ, ಹಝ್ರತ್ ಇಬ್ರಾಹೀಂ ಸಹಿತ ಎಲ್ಲ ಸೃಷ್ಟಿಗಳು ನನ್ನ ಬಳಿ ಬರುವ ದಿನಕ್ಕಾಗಿ ಕಾದಿರಿಸಿದೆ. (ಸಹೀಹ್ ಮುಸ್ಲಿಮ್ ಕಿತಾಬುಸ್ಸಲಾತುಲ್ ಮುಸಾಫಿರ್......... ಭಾಷಾಂತರ ನೂರ್ ಫೌಂಡೇಶನ್, ಸಂಪುಟ–3, ಪುಟ–308–309)

ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಗೆ(ರ) ಪವಿತ್ರ ಖುರ್‌ಆನಿನಲ್ಲಿ ನೈಪುಣ್ಯವಿತ್ತು. ಹಝ್ರತ್ ಪೈಗಂಬರ್(ಸ) ಸ್ವತಃ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಂದ(ರ) ಪೂರ್ತಿ ಪವಿತ್ರ ಖುರ್‌ಆನ್ ಪಾರಾಯಣ ಮಾಡಿಸುತ್ತಿದ್ದರು ಎಂಬುವುದರಿಂದ ಅವರಿಗೆ ಅದರಲ್ಲಿ ಇದ್ದ ಪ್ರಾವೀಣ್ಯತೆಯ ಅರಿವಾಗುತ್ತದೆ. ಹಝ್ರತ್ ಪೈಗಂಬರ್(ಸ) ನಿಧನರಾದ ವರ್ಷ, ಪೈಗಂಬರ್(ಸ) ಹಝ್ರತ್ ಉಬಯ್ಯ್‌ರಿಗೆ(ರ) ಪವಿತ್ರ ಖುರ್‌ಆನ್ ಓದಿ ಹೇಳಿದರು.
(ಸೈರುಸ್ಸಹಾಬ, ಸಂಪುಟ–3, ಪುಟ–149, ದಾರುಲ್ ಇಶಾಅತ್ ಉರ್ದು ಬಜಾರ್ ಕರಾಚಿ)

'ಉಬಯ್ಯ್‌ರಿಗೆ ಪವಿತ್ರ ಖುರ್‌ಆನ್ ಓದಿ ಹೇಳಲು ಜಿಬ್ರೀಲ್ ಹೇಳಿದ್ದರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಪೈಗಂಬರರ(ಸ) ಅನುಗ್ರಹೀತ ಕಾಲದಲ್ಲಿ, ಹಝ್ರತ್ ಉಬಯ್ಯ್ ಒಬ್ಬ ಇರಾನೀ ವ್ಯಕ್ತಿಗೆ ಪವಿತ್ರ ಖುರ್‌ಆನ್ ಓದಿಸುತ್ತಿದ್ದರು. ಅವರಿಗೆ **ಇನ್ನ ಶಜರತಝ್ಝಖೂಮ್ ತಆಮುಲ್ ಅಸೀಮ್** ಎಂಬ ಆಯತ್ತನ್ನು ಓದಿ ಹೇಳಿದಾಗ, ಇರಾನೀ ವ್ಯಕ್ತಿಗೆ ಅಸೀಮ್ ಎಂದು ಉಚ್ಚರಿಸಲು ಸಾಧ್ಯವಾಗುತ್ತಿರಲಿಲ್ಲ. 'ಸ' ವನ್ನು 'ತ' ಎಂದು ಉಚ್ಚರಿಸುತ್ತಿದ್ದನು. ಪ್ರತಿ ಬಾರಿ ಅಸೀಮ್ ಎಂದು ಹೇಳುಕೊಡುವಾಗ, ಅವನು ಯತೀಮ್ ಎಂದು ಹೇಳುತ್ತಿದ್ದ. ಇವನಿಗೆ ಹೇಗೆ ಕಲಿಸುವುದು ಎಂಬುವುದರ ಬಗ್ಗೆ ಹಝ್ರತ್ ಉಬಯ್ಯ್ ಚಿಂತಿತರಾದರು. ಆ ಸಮಯದಲ್ಲಿ ಅಲ್ಲಿಂದ ಹಝ್ರತ್ ಪೈಗಂಬರ್(ಸ) ದಾಟಿಹೋಗುತ್ತಿದ್ದರು. ಹಝ್ರತ್ ಉಬಯ್ಯ್ ಚಿಂತಿರಾಗಿರುವುದನ್ನು ಕಂಡು ಅಲ್ಲಿ ನಿಂತುಬಿಟ್ಟರು. ಅವನೊಡನೆ ತಆಮುಲ್ ತಾಝೀಂ ಎಂದು ಉಚ್ಚರಿಸಲು ಹೇಳಲು ಹಝ್ರತ್ ಉಬಯ್ಯ್‌ರೊಡನೆ ಆದೇಶಿಸಿದರು. ಹಾಗೆ ಹೇಳಿದಾಗ, ಆ ಇರಾನ ವ್ಯಕ್ತಿಯಿಂದ ಅಸೀಮ್ ಎಂಬ ಉಚ್ಚಾರಣೆ ಸರಿಯಾಗಿ ಬಂತು. ಹಝ್ರತ್ ಪೈಗಂಬರ್(ಸ) ಉಬಯ್ಯ್‌ರೊಡನೆ ಹೇಳಿದರು: ಅವನ ಭಾಷೆಯ ಉಚ್ಚಾರಣೆಯನ್ನು ಮುಂದಿರಿಸಿ ಪವಿತ್ರ ಖುರ್‌ಆನ್ ಕಲಿಸಿಕೊಡು. ಆಗ ಅವನು ಸರಿಯಾದ ಉಚ್ಚಾರಣೆಯೊಂದಿಗೆ ಪವಿತ್ರ ಖುರ್‌ಆನ್ ಓದುವಂತೆ ಆಗುವನು.ಅವನಿಂದ ಸರಿಯಾದ ಪದಗಳನ್ನು ಹೊರಗೆ ತೆಗೆ. ಅಲ್ಲಾಹನು ನಿನಗೆ ಅದರ ಪ್ರತಿಫಲವನ್ನು ನೀಡುವನು. (ಸೈರುಸ್ಸಹಾಬ, ಸಂಪುಟ–2, ಪುಟ–152, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಒಂದು ಜುಮಾ ದಿನದಂದು ಹಝ್ರತ್ ಪೈಗಂಬರ್(ಸ) ಖುತ್‌ಬ ನೀಡುತ್ತಿದ್ದರು. ಅದರಲ್ಲಿ ಸೂರಃ ಬರಾಅತ್, ಎಂದರೆ, ಸೂರಃ ತೌಬಾದ ತಿಲಾವತ್ ಮಾಡಿದರು.ಈ ಸೂರತ್ತಿನ ಬಗ್ಗೆ ಹಝ್ರತ್ ಅಬುದರ್‌ದ ಮತ್ತು ಹಝ್ರತ್ ಅಬೂಧರ್‌ಗೆ ತಿಳಿದಿರಲಿಲ್ಲ. ಖುತ್‌ಬದ ಮಧ್ಯೆದಲ್ಲೇ, ಈ ಸೂರತ್ ಯಾವಾಗ ಅವತೀರ್ಣವಾಯಿತೆಂದೂ ನಾವು ಅದನ್ನು ಇದು ವರೆಗೆ ಆಲಿಸಿರಲಿಲ್ಲ ಎಂದು ಹಝ್ರತ್ ಉಬಯ್ಯ್‌ರೊಡನೆ ಸನ್ನೆ ಮಾಡಿ ಹೇಳಿದರು. ಹಝ್ರತ್ ಉಬಯ್ಯ್ ಸನ್ನೆಯಿಂದ ಅವರೊಡನೆ ಸುಮ್ಮನಿರಲು ಹೇಳಿದರು. ನಮಾಝಿನ ನಂತರ ಅವರು ಮನೆಗೆ ಹೋಗಲು ಎದ್ದಾಗ, ಅವರಿಬ್ಬರೂ ಹಝ್ರತ್ ಉಬಯ್ಯ್‌ರೊಡನೆ, ಅವರ ಸವಾಲಿಗೆ ಉತ್ತರವೇಕೆ ಕೊಡಲಿಲ್ಲವೆಂದು ಕೇಳಿದರು. ಇದಕ್ಕೆ ಉತ್ತರವಾಗಿ, ಹಝ್ರತ್ ಉಬಯ್ಯ್ ಹೇಳಿದರು: ಇಂದು ನಿಮ್ಮ ನಮಾಝ್ ವ್ಯರ್ಥವಾಯಿತು. ಅದು ಕೂಡ ಒಂದು ವ್ಯರ್ಥವಾದ ಕಾರ್ಯದಿಂದ. ಇದನ್ನು ಕೇಳಿ ಅವರು ಹಝ್ರತ್ ಪೈಗಂಬರರ(ಸ) ಬಳಿಗೆ ಹೋದರು. ಹಝ್ರತ್ ಉಬಯ್ಯ್(ರ) ಹೀಗೆ ಹೇಳುತ್ತಾರೆಂದು ಹಝ್ರತ್ ಪೈಗಂಬರ್‌ರೊಡನೆ(ಸ) ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರು ಸತ್ಯವೇ ಹೇಳಿದ್ದಾರೆ. ಎಂದರೆ, ಖುತ್‌ಬದ ಮಧ್ಯೆ ನೀವು ಮಾತನಾಡಬಾರದಾಗಿತ್ತು. (ಸೈರುಸ್ಸಹಾಬ, ಸಂಪುಟ–2, ಪುಟ–157, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ಪೈಗಂಬರ್(ಸ) ಕೇಳಿದರು: ಹೇ ಅಬೂಮುಂಧಿರ್, ನಿಮ್ಮ ಬಳಿಯಿರುವ ಅಲ್ಲಾಹನ ಗ್ರಂಥದಲ್ಲಿ ಅತ್ಯಂತ ಶ್ರೇಷ್ಠ ವಚನ ಯಾವುದೆಂದು ನಿಮಗೆ ಗೊತ್ತಿದೆಯೇ? ಅಲ್ಲಾಹನು ಮತ್ತು ಅವನ ರಸೂಲ್ ಚೆನ್ನಾಗಿ ಬಲ್ಲರು ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಪುನಃ ಕೇಳಿದರು: ನಿಮ್ಮ ಬಳಿಯಿರುವ ಅಲ್ಲಾಹನ ಗ್ರಂಥದಲ್ಲಿ ಅತ್ಯಂತ ಶ್ರೇಷ್ಠ ವಚನ ಯಾವುದೆಂದು ನಿಮಗೆ ಗೊತ್ತಿದೆಯೇ? ಆಗ ನಾನು ಹೇಳಿದೆ: **ಅಲ್ಲಾಹು ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್ ಖಯ್ಯೂಮ್**. ಆಗ ಹಝ್ರತ್ ಪೈಗಂಬರ್(ಸ) ನನ್ನ ಎದೆಯ ಮೇಲೆ ಕೈಯಿಟ್ಟು ಹೇಳಿದರು: ಅಲ್ಲಾಹನಾಣೆ, ಹೇ ಅಬೂ ಮುಂಧಿರ್, ಈ ಅರಿವು ನಿನಗೆ ಅನುಗ್ರಹವಾಗಲಿ. (ಸಹೀಹ್ ಮುಸ್ಲಿಮ್ ಕಿತಾಬುಸ್ಸಲಾತಿಲ್ ಮುಸಾಫಿರ್, ಭಾಷಾಂತರ ನೂರ್ ಫೌಂಡೇಶನ್, ಸಂಪುಟ–3, ಪುಟ–300)

ಅವರ ಉತ್ತರವನ್ನು ಸರಿಯೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಪೈಗಂಬರರ(ಸ) ಪರಿಶುದ್ಧ ಕಾಲಘಟ್ಟದಲ್ಲಿ ಹಝ್ರತ್ ಉಬಯ್ಯ್(ರ) ಹಝ್ರತ್ ತುಫೈಲ್ ಬಿನ್ ಅಮ್ರ್‌ದೂಸಿಗೆ(ರ) ಪವಿತ್ರ ಖುರ್‌ಆನ್ ಕಲಿಸಿದ್ದರು. ಅವರು ಒಂದು ಬಿಲ್ಲನ್ನು ಹಝ್ರತ್ ಉಬಯ್ಯ್‌ರಿಗೆ(ರ) ಕಾಣಿಕೆಯಾಗಿ ಕೊಟ್ಟರು. ಹಝ್ರತ್ ಉಬಯ್ಯ್(ರ) ಅದನ್ನು ತೋಳಿಗೆ ಹಾಕಿಕೊಂಡು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. ಇದನ್ನು ಎಲ್ಲಿಂದ ತಂದಿದ್ದೀಯ? ಎಂದು ಹಝ್ರತ್ ಪೈಗಂಬರ್(ಸ)ಕೇಳಿದರು. ಇದು ಒಬ್ಬ ಶಿಷ್ಯನ ಕಾಣಿಕೆಯಾಗಿದೆ ಎಂದು ಹಝ್ರತ್ ಉಬಯ್ಯ್ ಹೇಳಿದರು. ಅದನ್ನು ಮರಳಿಕೊಡಲು ಹಝ್ರತ್ ಪೈಗಂಬರ್(ಸ)ಹೇಳಿದರು. ಇನ್ನು ಮುಂದೆ ಇಂತಹ ಕೊಡುಗೆಗಳಿಂದ ದೂರವಿರಲು ಹೇಳಿದರು. ಇದೇ ರೀತಿಯಲ್ಲಿ, ಒಬ್ಬ ಶಿಷ್ಯ ಅವರಿಗೆ ಒಂದು ಬಟ್ಟೆಯನ್ನು ಕಾಣಿಕೆಯಾಗಿ ಕೊಟ್ಟಿದ್ದರು. ಆಗಲೂ ಹೀಗೆಯೇ ಹೇಳಲಾಯಿತು. ಆದ್ದರಿಂದ ಅದರ ನಂತರ ಈ ಸಂಗತಿಗಳಿಂದ ಸಂಪೂರ್ಣವಾಗಿ ದೂರವಾದರು. ಎಂದರೆ, ಪವಿತ್ರ ಖುರ್‌ಆನ್ ಕಲಿಸಿದಕ್ಕೆ ಪ್ರತಿಫಲವಾಗಿ ಯಾವುದೇ ಗುರುದಕ್ಷಿಣೆ ಪಡೆಯಬಾರದು ಎಂದು ಹೇಳಿದರು. ಸಿರಿಯಾದ ಜನರು ಅವರಿಂದ ಪವಿತ್ರ ಖುರ್‌ಆನ್ ಕಲಿಯುತ್ತಿದ್ದರು.ಮದೀನದ ಬರಹಗಾರರಿಂದ ಪವಿತ್ರ ಖುರ್‌ಆನ್ ಬರೆಸುತ್ತಲೂ ಇದ್ದರು.ಬರಹಕ್ಕೆ ಪ್ರತಿಫಲವಾಗಿ, ಸಿರಿಯಾದ ಜನರು ಬರಹಗಾರರನ್ನು ಊಟಕ್ಕೆ ಆಮಂತ್ರಿಸುತ್ತಿದ್ದರು.ಅವರಿಗೆ ಊಟ ಬಡಿಸಿ ಕೊಡುವುದಾಗಿತ್ತು ಅದರ ಪ್ರತಿಫಲ. ಆದರೆ ಹಝ್ರತ್ ಉಬಯ್ಯ್ ಒಂದು ಬಾರಿಯೂ ಅವರ ಆಮಂತ್ರಣವನ್ನು ಸ್ವೀಕರಿಸುತ್ತಿರಲಿಲ್ಲ. ಸಿರಿಯಾದ ಆಹಾರ ಹೇಗಿದೆ ಎಂದು ಒಂದು ಸಲ ಹಝ್ರತ್ ಉಮರ್(ರ) ಹಝ್ರತ್ ಉಬಯ್ಯ್‌ರೊಡನೆ ಕೇಳಿದರು. ಹಝ್ರತ್ ಉಬಯ್ಯ್ ಹೇಳಿದರು: ನಾನು ಅವರ ಬಳಿಯಿಂದ ಊಟ ಇಂದಿನ ವರೆಗೆ ಮಾಡಿಲ್ಲ, ನಾನು ನನ್ನದೇ ಊಟವನ್ನು ಮಾಡುತ್ತೇನೆ. (ಸೈರುಸ್ಸಹಾಬ, ಸಂಪುಟ–3, ಪುಟ–151–152, ದಾರುಲ್ ಇಶಾಅತ್ ಉರ್ದು ಬಜಾರ್ ಕರಾಚಿ)

ಹಝ್ರತ್ ಉಬಯ್ಯ್(ರ) ಬದ್ರ್, ಉಹದ್, ಖಂದಕ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರರೊಂದಿಗೆ(ಸ) ಭಾಗವಹಿಸಿದ್ದರು. (ಅತ್ತಬಖಾತುಲ್ ಕಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–378, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಉಹದ್ ಯುದ್ಧದಲ್ಲಿ ಒಂದು ಬಾಣ ಅವರ ಶರೀರದ ಒಂದು ಪ್ರಧಾನವಾದ ರಕ್ತನಾಳಕ್ಕೆ ತಗುಲಿತ್ತು. ತಲೆ, ಎದೆಯ ಹಿಂಭಾಗ, ಕೈಕಾಲುಗಳು ಇತ್ಯಾದಿಗಳಿಗೆ ರಕ್ತ ಒಯ್ಯುವ, ಮೀಡಿಯಂ ವೇನ್ ಎಂದು ಕರೆಯಲ್ಪಡುವ ಅಭಿದಮನಿಗೆ ಬಾಣ ತಗುಲಿದಾಗ, ಹಝ್ರತ್ ಪೈಗಂಬರ್(ಸ) ಒಬ್ಬ ವೈದ್ಯನನ್ನು ಚಿಕಿತ್ಸೆಗಾಗಿ ಕಳುಹಿಸಿದರು. ಆಗ ಅವರು ಆ ರಕ್ತನಾಳವನ್ನು ಶಸ್ತ್ರಕ್ರಿಯೆ ಮೂಲಕ ಹೊರತೆಗೆದು ಚಿಕಿತ್ಸೆ ನಡೆಸಿದರು. (ಸೈರುಸ್ಸಹಾಬ, ಸಂಪುಟ–3, ಪುಟ–141–

142,ದಾರಲ್ ಇಶಾಅತ್ ಬೈರೂತ್, ಉರ್ದು ಬಜಾರ್ ಕರಾಚಿ) (ಉರ್ದು ಲುಘತ್, ಸಂಪುಟ–22, ಪುಟ–29, ಉರ್ದು ಲಿಗತ್ ಬೋರ್ಡ್ ಕರಾಚಿ)

ಉಹದ್ ಯುದ್ಧದ ಒಂದು ಘಟನೆ ಮೊದಲು ಸಹ ಹೇಳಿದ್ದೆ. ಇಲ್ಲೂ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಉಬಯ್ಯ್‌ರೊಡನೆ ಗಾಯಾಳುಗಳನ್ನು ನೋಡಿಬರಲು ಹೇಳಿದರು. ಅವರು ನೋಡುತ್ತಾ ಹಝ್ರತ್ ಸಅದ್ ಬಿನ್ ರಬೀಅ್‌ರ ಬಳಿಗೆ ತಲುಪಿದರು.ಅವರು ತೀವ್ರವಾಗಿ ಗಾಯಗೊಂಡಿದ್ದರು.ಕೊನೆಯುಸಿರು ಎಳೆಯುತ್ತಿದ್ದರು. ಹಝ್ರತ್ ಉಬಯ್ಯ್ ಹಝ್ರತ್ ಸಅದ್‌ರೊಡನೆ ಹೇಳಿದರು: ನಿಮ್ಮ ಸಂಬಂಧಿಕರಿಗೆ ಮತ್ತು ಸ್ನೇಹಿತರಿಗೆ ಏನಾದರೂ ಸಂದೇಶ ತಲುಪಿಸಲು ಇದ್ದರೆ, ನನ್ನೊಡನೆ ಹೇಳಿರಿ. ಹಝ್ರತ್ ಸಅದ್(ರ) ಮುಗುಳ್ನಗುತ್ತಾ ಹೇಳಿದರು: ಮುಸ್ಲಿಮನಾದ ಯಾರಾದರೂ, ಇಲ್ಲಿಗೆ ಬಂದರೆ, ಅವನೊಡನೆ ನನ್ನ ಸಂದೇಶ ಹೇಳಿಕೊಡಲು ನಾನು ಕಾಯುತ್ತಿದ್ದೆ. ನೀವು ನನ್ನ ಕೈಯ ಮೇಲೆ ಕೈಹಾಕಿರಿ.ನನ್ನ ಸಂದೇಶ ಖಂಡಿತ ತಲುಪಿಸುವೆ ಎಂದು ವಾಗ್ದಾನ ಮಾಡಿರಿ. ಅವರ ಸಂದೇಶ ಇದಾಗಿತ್ತು: 'ನನ್ನ ಸ್ನೇಹಿತರಾದ ಮುಸ್ಲಿಮರಿಗೆ ನನ್ನ ಸಲಾಂ ತಲುಪಿಸಿರಿ. ಹಝ್ರತ್ ಪೈಗಂಬರ್(ಸ) ನಮ್ಮ ಬಳಿ ಇರುವ ಅಲ್ಲಾಹನ ಅತ್ಯುತ್ತಮ ಅಮಾನತ್ತಾಗಿದೆ, ಅಮೂಲ್ಯ ಅನುಗ್ರಹವಾಗಿದೆ ಎಂದು ನನ್ನ ಸಮುದಾಯ ಮತ್ತು ಸಂಬಂಧಿಕರೊಡನೆ ಹೇಳಿರಿ. ನಾವು ನಮ್ಮ ಜೀವದೊಂದಿಗೆ ಈ ನಿಧಿಯನ್ನು ಸಂರಕ್ಷಿಸುತ್ತಿದ್ದೆವು. ಈಗ ನಾವು ಹೋಗುತ್ತಿದ್ದೇವೆ. ಈ ಅಮಾನತ್ತಿನ ಸುರಕ್ಷೆಯ ಜವಾಬ್ದಾರಿಯನ್ನು ನಿಮಗೆ ಒಪ್ಪಿಸುತ್ತಿದ್ದೇವೆ. ನೀವು ಇದರ ಸುರಕ್ಷೆಯಲ್ಲಿ ದೌರ್ಬಲ್ಯವನ್ನು ತೋರಿಸದಿರಿ.' (ತಫ್‌ಸೀರೆ ಕಬೀರ್, ಸಂಪುಟ–7, ಪುಟ–338)

ಹಿಜರಿ 9ರಲ್ಲಿ ಝಕಾತ್ ಕಡ್ಡಾಯವಾದಾಗ, ಹಝ್ರತ್ ಪೈಗಂಬರ್(ಸ) ಸದಖ ಮತ್ತು ಝಕಾತ್ ವಸೂಲು ಮಾಡಲಿಕ್ಕೆ ಕಾರ್ಯಕರ್ತರನ್ನು ಅರೇಬಿಯದ ರಾಜ್ಯಗಳಿಗೆ ರವಾನೆ ಮಾಡಿದರು. ಬನೂಬಲಿ, ಬನೂಝುಹರ್ ಮತ್ತು ಬನೂ ಸಅದ್ ಗೋತ್ರಗಳಲ್ಲಿ ಸದಖ ವಸೂಲು ಮಾಡಲು ಹಝ್ರತ್ ಉಬಯ್ಯ್‌ರನ್ನು(ರ) ನಿಶ್ಚಯಿಸಲಾಯಿತು. ಒಂದು ಸಲ ಹಝ್ರತ್ ಉಬಯ್ಯ್(ರ) ಒಂದು ಗ್ರಾಮಕ್ಕೆ ಹೋದಾಗ, ಒಬ್ಬ ವ್ಯಕ್ತಿ ತನ್ನೆಲ್ಲ ಜಾನುವಾರುಗಳನ್ನು ತಂದು ಮುಂದೆ ನಿಲ್ಲಿಸಿದರು. ಇವುಗಳಲ್ಲಿ ಇಷ್ಟವುಳ್ಳದ್ದು ಝಕಾತಿಗಾಗಿ ಆಯ್ಕೆ ಮಾಡಿರಿ ಎಂದು ಹೇಳಿದರು. ಹಝ್ರತ್ ಉಬಯ್ಯ್(ರ) ಎರಡು ವರ್ಷದ ಒಂದು ಒಂಟೆಯನ್ನು ತೆಗೆದರು. ಆ ವ್ಯಕ್ತಿ ಹೇಳಿದರು: ಇದನ್ನು ತೆಗೆಯುವುದರಿಂದ ಏನು ಪ್ರಯೋಜನ, ಇದು ಹಾಲು ಸಹ ಕೊಡಲಿಕ್ಕಿಲ್ಲ, ಇದು ಸವಾರಿಗೂ ಯೋಗ್ಯವಲ್ಲ. ನೀವು ತೆಗೆಯಲು ಇಚ್ಛಿಸುವರಾದರೆ, ಈ ಒಂಟೆಯನ್ನು ಸ್ವೀಕರಿಸಿರಿ. ಇದು ದಪ್ಪಪುಷ್ಟವಾಗಿದೆ ಮತ್ತು ಮಧ್ಯಮ ಪ್ರಾಯದ್ದೂ ಆಗಿದೆ. ಹಝ್ರತ್ ಉಬಯ್ಯ್ ಹೇಳಿದರು: ಇದು ಸಾಧ್ಯವಲ್ಲ, ಹಝ್ರತ್ ಪೈಗಂಬರರ(ಸ) ನಿರ್ದೇಶನಕ್ಕೆ ವಿರುದ್ಧವಾಗಿ ನಾನು ಏನೂ ಮಾಡಲಕ್ಕಿಲ್ಲ. ಒಳ್ಳೆಯದೇನೆಂದರೆ, ನನ್ನೊಂದಿಗೆ ಬಾ, ಮದೀನ ಇಲ್ಲಿಂದ ಅಷ್ಟೇನೂ ದೂರವಲ್ಲ. ಹಝ್ರತ್ ಪೈಗಂಬರರ(ಸ) ಬಳಿಗೆ ಹೋಗುವಾ, ಅವರು ಹೇಳುವ ಪ್ರಕಾರ ಮಾಡು. ಆಗ ಆ ವ್ಯಕ್ತಿ ಇದನ್ನು ಸಮ್ಮತಿಸಿದನು. ಹಝ್ರತ್ ಉಬಯ್ಯ್‌ರೊಡನೆ, ಒಂಟೆ ಸಮೇತ ಮದೀನಕ್ಕೆ ಬಂದರು. ಹಝ್ರತ್ ಪೈಗಂಬರರೊಡನೆ ಎಲ್ಲ ಸಂಗತಿಯನ್ನು ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ದೊಡ್ಡ ಒಂಟೆಯನ್ನು ನೀಡುವುದಾಗಿದೆ, ನಿನ್ನ ಇಚ್ಛೆಯೆಂದಾದರೆ, ನಿನಗೆ ಕೊಡಬಹುದಾಗಿದೆ. ಅದನ್ನು ಸ್ವೀಕರಿಸಲಾಗುವುದು. ಅಲ್ಲಾಹನು ನಿನಗೆ ಅದರ ಪ್ರತಿಫಲವನ್ನು ನೀಡುವನು. ಆ ವ್ಯಕ್ತಿ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಒಂಟೆಯನ್ನು ನೀಡಿ ಮರಳಿಹೋದರು.

ಹಝ್ರತ್ ಅಬೂಬಕ್ಕರ್‌ರ(ರ) ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನಿನ ಕ್ರಮೀಕರಿಸುವ ಮತ್ತು ಸಂಕಲನದ ಕೆಲಸ ಶುರುವಾಯಿತು. ಈ ಸೇವೆಗಾಗಿ ನಿಶ್ಚಯಿಸಲಾದ ಸಹಾಬರ ಸಂಘದ ಮೇಲ್ನೋಟಗಾರ ಹಝ್ರತ್ ಉಬಯ್ಯ್(ರ) ಆಗಿದ್ದರು. ಅವರು ಪವಿತ್ರ ಖುರ್‌ಆನಿನ ಪದಗಳನ್ನು ಹೇಳುತ್ತಾ ಹೋಗುವಾಗ, ಜನರು ಅವುಗಳನ್ನು ಬರೆಯುತ್ತಿದ್ದರು. ಇದು ಪಂಡಿತರನ್ನೊಳಗೊಂಡ ಸಂಘವಾದ ಕಾರಣದಿಂದ ಕೆಲವು ವಚನಗಳ ಬಗ್ಗೆ ಚರ್ಚೆ ಮತ್ತು ಸಂವಾದ ನಡೆಯುತ್ತಿತ್ತು. ಹೀಗೆ ಸೂರಃ ತೌಬದ ಆಯತಾದ **ಸುಮ್ಮಂಸರಫುಲ್ಲಾಹು ಖುಲೂಬಹುಮ್ ಬಿಅನ್ನಹುಮ್ ಖೌಮುನ್ ಲಾಯಫ್‌ಖಹೂನ್** ಬರೆಯಲಾಯಿತು. ಆಗ ಜನರು ಹೇಳಿದರು. ಇದು ಈ ಸೂರತಿನ ಕೊನೆಯ ಆಯತಾಗಿದೆ. ಹಝ್ರತ್ ಉಬಯ್ಯ್ ಹೇಳಿದರು: ಅಲ್ಲ, ಇದರ ನಂತರ ಎರಡು ಆಯತುಗಳನ್ನು ನನಗೆ ಹಝ್ರತ್ ಪೈಗಂಬರ್(ಸ) ಹೇಳಿಕೊಟ್ಟಿದ್ದಾರೆ. ಆದ್ದರಿಂದ ಇದು ಕೊನೆಯ ಆಯತಲ್ಲ, ಇದು ಕೊನೆಯ ಎರಡು ಆಯತುಗಳಿಗೆ ಮುಂಚಿನ ಆಯತಾಗಿದೆ. (ಸೈರುಸ್ಸಹಾಬ, ಸಂಪುಟ–2, ಪುಟ–142, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಹಝ್ರತ್ ಉಮರ್(ರ) ತನ್ನ ಖಿಲಾಫತ್ ಕಾಲದಲ್ಲಿ ನೂರಾರು ಪ್ರಯೋಜನಕಾರಿ ಸಂಗತಿಗಳನ್ನು ವರ್ಧಿಸಿದ್ದರು. ಅದರಲ್ಲಿ ಒಂದು ಮಜ್‌ಲಿಸೇ ಶೂರಾದ ಸ್ಥಾಪನೆಯಾಗಿತ್ತು. ಇಸ್ಲಾಮಿನಲ್ಲಿ ಮಜ್‌ಲಿಸೆ ಶೂರಾದ ಸ್ಥಾಪನೆ ಹಝ್ರತ್ ಉಮರರ(ರ) ಖಿಲಾಫತ್ ಕಾಲಘಟ್ಟದಲ್ಲಿ ಆಗಿತ್ತು. ಈ ಸಭೆ ಅನ್ಸಾರ್ ಮತ್ತು ಮುಹಾಜಿರರ ಶ್ರೇಷ್ಠ ಮತ್ತು ಸಮರ್ಥರಾದ ಸಹಾಬಿಯರನ್ನು ಒಳಗೊಂಡಿತ್ತು. ಅದರಲ್ಲಿ ಖಝ್‌ರಜ್ ಗೋತ್ರದ ಕಡೆಯಿಂದ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಸಹ ಸದಸ್ಯರಾಗಿದ್ದರು. ಜಾಬಿರ್ ಬಿನ್ ಝುಬೈರ್ ಎಂಬ ಹೆಸರಿನ ಒಬ್ಬ ವ್ಯಕ್ತಿ ಹೇಳುತ್ತಾರೆ: ನಾನು ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ, ತನ್ನೊಂದು ಕೆಲಸಕ್ಕಾಗಿ ಅವರ ಬಳಿಗೆ ಹೋದೆನು. ಹಝ್ರತ್ ಉಮರರ(ರ) ಸಮೀಪ ಒಬ್ಬ ವ್ಯಕ್ತಿ ನಿಂತಿದ್ದರು. ಅವರ ಕೂದಲು ಮತ್ತು ಬಟ್ಟೆಯ ಬಣ್ಣ ಬಿಳಿಯಾಗಿತ್ತು. ಅವರು ಹೇಳಿದರು: ನಿಶ್ಚಯವಾಗಿಯೂ, ಈ ಲೋಕದಲ್ಲಿ, ನಮಗೆ ಗುರಿ ತನಕ ತಲುಪಲು ಬೇಕಾಗಿರುವ ಮಾರ್ಗಗಳು ಇವೆ. ಅದೇ ರೀತಿಯಲ್ಲಿ, ಪರಲೋಕಕ್ಕಾಗಿ ಬೇಕಾಗಿರುವ ಸಾಮಾನುಗಳು ಸಹ ಇಲ್ಲಿವೆ. ಇದರಲ್ಲೇ ನಮ್ಮ ಕರ್ಮಗಳಿವೆ. ಇದರ ಪ್ರತಿಫಲ ಪರಲೋಕದಲ್ಲಿ ಲಭಿಸುವುದು. ಇದು ಯಾರೆಂದು ನಾನು ಅಮೀರುಲ್ ಮೂಮಿನೂನ್‌ರೊಡನೆ ಕೇಳಿದೆ. ಹಝ್ರತ್ ಉಮರ್(ರ) ಹೇಳಿದರು: ಇದು ಮುಸ್ಲಿಮರ ಸರದಾರ, ಉಬಯ್ಯ್ ಬಿನ್ ಕಅ್‌ಬ್ ಆಗಿದ್ದಾರೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–378–379, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಅಬ್ದುರ್ರಹ್ಮಾನ್ ಬಿನ್ ಅಬ್ದು ಖಾರಿ ವರದಿ ಮಾಡುತ್ತಾರೆ: ನಾನು ರಮಝಾನಿನ ಒಂದು ರಾತ್ರಿ, ಹಝ್ರತ್ ಉಮರರೊಂದಿಗೆ(ರ) ಮಸೀದಿಯ ಕಡೆಗೆ ಹೊರಟೆನು. ಜನರು ಬೇರೆ ಬೇರೆ ಗುಂಪಿನಲ್ಲಿ ವಿಭಜಿಸಲ್ಪಟ್ಟಿದ್ದಾಗಿ ಕಂಡೆನು. ಕೆಲವರು ಒಬ್ಬಂಟಿಯಾಗಿ ನಮಾಝ್ ಮಾಡುತ್ತಿದ್ದರು. ಕೆಲವರು ಇಮಾಮರ ಹಿಂದೆ ನಿಂತು ನಮಾಝ್ ಮಾಡುತ್ತಿದ್ದರು. ಬಹುಶಃ ಅವರು ಆಗ ರಾತ್ರಿ ಸಮಯದಲ್ಲಿ ನಫ್ಲ್ ನಮಾಝ್ ನಿರ್ವಹಿಸುತ್ತಿದ್ದರು ಎಂದು ತೋರುತ್ತದೆ. ಹಝ್ರತ್ ಉಮರ್(ರ) ಹೇಳಿದರು: ಇವರನ್ನೆಲ್ಲ ಒಬ್ಬ ಖಾರಿಯ ಹಿಂದೆ ನಮಾಝ್ ಮಾಡುವಂತೆ ಒಟ್ಟುಗೂಡಿಸಿದರೆ, ಉತ್ತಮವಾಗುತ್ತಿತ್ತು. ಅನಂತರ ಅವರು ಈ ಒಂದು ನಿರ್ಧಾರವನ್ನು ಮಾಡಿ, ಎಲ್ಲರನ್ನು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರ ಇಮಾಮತಿನ ಹಿಂದೆ ಒಟ್ಟುಸೇರಿಸಿದರು. (ಸಹೀಹ್ ಬುಖಾರಿ, ಕಿತಾಬುಸ್ಸಲಾತುತ್ತರಾವಿಹ್, ಹದೀಸ್–2010, ಸಂಪುಟ–3, ಪುಟ–680–681, ಸಝಾರತ್ ಇಶಾಅತ್ ರಬ್ವಾಹ್)

ಹಝ್ರತ್ ಪೈಗಂಬರರಿಂದ(ಸ) ಹದೀಸುಗಳ ಬಹುಭಾಗವನ್ನು ಕೇಳಿದ್ದ ಹಿರಿಯ ಸಹಾಬಿಯರಲ್ಲಿ ಹಝ್ರತ್ ಉಬಯ್ಯ್(ರ) ಸೇರಿದ್ದರು. ಈ ಕಾರಣದಿಂದಲೇ ಹಲವು ಸಹಾಬಿಯರು ಹದೀಸ್‌ಗಳನ್ನು ಕಲಿಯುವುದರಲ್ಲಿ ಹಝ್ರತ್ ಉಬಯ್ಯರ(ರ) ಶಿಷ್ಯರಾಗಿದ್ದಾರೆ. ಅವರ ಹದೀಸಿನ ದರ್ಸನ್ನು ಕೇಳಲು ಹೆಚ್ಚಾಗಿ ಸಹಾಬಿಯರು ಒಟ್ಟುಗೂಡುತ್ತಿದ್ದರು. ಹಝ್ರತ್ ಉಮರ್ ಬಿನ್ ಖತ್ತಾಬ್(ರ), ಹಝ್ರತ್ ಅಬೂಅಯ್ಯೂಬ್ ಅನ್ಸಾರಿ(ರ), ಹಝ್ರತ್ ಉಬಾದ ಬಿನ್ ಸಾಮಿತ್(ರ), ಹಝ್ರತ್ ಅಬೂಹುರೈರ(ರ), ಹಝ್ರತ್ ಅಬೂಮೂಸಾ ಅಶ್‌ಅರಿ(ರ), ಹಝ್ರತ್ ಅನಸ್ ಬಿನ್ ಮಾಲಿಕ್(ರ), ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ), ಹಝ್ರತ್ ಸಹಲ್ ಬಿನ್ ಸಅದ್(ರ) ಮುಂತಾದವರು ಹಝ್ರತ್ ಉಬಯ್ಯ್‌ರ(ರ) ಹದೀಸುಗಳ ಅರಿವಿನಿಂದ ಪ್ರಯೋಜನ ಪಡೆಯುತ್ತಿದ್ದರು. (ಸೈರುಸ್ಸಹಾಬ, ಸಂಪುಟ–3, ಪುಟ–153, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಹಝ್ರತ್ ಖೈಸ್ ಬಿನ್ ಉಬಾದ(ರ) ಮದೀನದಲ್ಲಿ ಸಹಾಬರನ್ನು ಭೇಟಿಯಾಗಲು ಬಂದಿದ್ದರು. ಅವರು ಹೇಳುತ್ತಾರೆ: ನಾನು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಗಿಂತ(ರ) ಶ್ರೇಷ್ಠರಾಗಿ ಯಾರನ್ನೂ ಕಂಡಿಲ್ಲ. ನಮಾಝಿನ ಸಮಯವಾಗಿತ್ತು. ಜನರು ಒಟ್ಟುಸೇರಿದ್ದರು. ಹಝ್ರತ್ ಉಮರ್(ರ) ಸಹ ಅಲ್ಲಿದ್ದರು. ಯಾವುದೋ ಒಂದು ಸಂಗತಿಯ ಬಗ್ಗೆ ಕಲಿಸಿ ಕೊಡಬೇಕಾಗಿತ್ತು. ನಮಾಝ್ ಕೊನೆಗೊಂಡಾಗ, ಹಝ್ರತ್ ಉಬಯ್ಯ್ ಎದ್ದರು ಮತ್ತು ಹಝ್ರತ್ ಪೈಗಂಬರರ(ಸ) ಹದೀಸುಗಳನ್ನು ಜನರಿಗೆ ಹೇಳಿಕೊಟ್ಟರು. ಜನರ ಶ್ರದ್ಧೆಯ ಸ್ಥಿತಿಯೇನಾಗಿತ್ತೆಂದರೆ, ಜನರು ಬಹಳ ಆಸಕ್ತಿ ಮತ್ತು ಅಭಿರುಚಿಯಿಂದ ಕಿವಿಗೊಟ್ಟು ಕೇಳುತ್ತಿದ್ದರು. ಖೈಸ್‌ರ ಮೇಲೆ ಹಝ್ರತ್ ಉಬಯ್ಯ್‌ರ(ರ) ಈ ಪ್ರತಾಪ ಮತ್ತು ವೈಭವದ ಪ್ರಭಾವ ಉಂಟಾಗಿತ್ತು ಎಂದು ತೋರುತ್ತದೆ. (ಸೈರುಸ್ಸಹಾಬ, ಸಂಪುಟ–3, ಪುಟ–154, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಹಝ್ರತ್ ಉಮರ್(ರ) ಬಳಿಗೆ ಓರ್ವ ಸ್ತ್ರೀ ಬಂದು ಹೇಳಿದರು: ನನ್ನ ಗಂಡ ನಿಧನರಾಗಿದ್ದಾರೆ. ಅವರ ನಿಧನಕ್ಕೆ ಮುಂಚೆ ನಾನು ಗರ್ಭಿಣಿಯಾಗಿದ್ದೆ. ಅವರ ನಿಧನದ ನಂತರ ಮಗುವಿನ ಜನನವಾಯಿತು. ಆದರೆ, ಇದ್ದತ್ತಿನ ಕಾಲಾವಧಿ ಪೂರ್ತಿಯಾಗಿಲ್ಲ, ಗಂಡನ ನಿಧನದ ನಂತರದ ನಾಲ್ಕು ತಿಂಗಳು

ಹತ್ತು ದಿನದ ಇದ್ದತ್ ಕಾಲಾವಧಿ ಪೂರ್ತಿಯಾಗಿಲ್ಲ. ಈ ಸ್ಥಿತಿಯಲ್ಲಿ ನೀವು ಏನು ಹೇಳುತ್ತೀರಿ, ನಾನು ಇದ್ದತ್ ಪೂರ್ತಿ ಮಾಡಬೇಕೇ ಅಥವಾ ಸಾಕೇ? ಹಝ್ರ್‌ರತ್ ಉಮರ್(ರ) ಹೇಳಿದರು: ಕಾಲಾವಧಿ ಪೂರ್ತಿಯಾಗುವ ವರೆಗೆ ಕಾದಿರು. ಎಂದರೆ, ವಿಧವೆ ಸ್ತ್ರೀಗೆ ಇರುವ ಇದ್ದತಿನ ಕಾಲಾವಧಿಯನ್ನು ಪೂರ್ತಿ ಮಾಡು.ಆ ಸ್ತ್ರೀ ಹಝ್ರ್‌ರತ್ ಉಮರರ(ರ) ಬಳಿಯಿಂದ ಹಝ್ರ್‌ರತ್ ಉಬಯ್ಯ್‌ರ(ರ) ಸಮೀಪಕ್ಕೆ ಬಂದರು. ಅವರೊಡನೆ ಈ ಬಗ್ಗೆ ಕೇಳಿದರು. ಹಝ್ರ್‌ರತ್ ಉಮರ್‌ರೊಡನೆ(ರ) ಇದರ ಕುರಿತು ಕೇಳಿದ್ದ ಬಗ್ಗೆ ಮತ್ತು ಅದಕ್ಕೆ ಹಝ್ರ್‌ರತ್ ಉಮರ್(ರ) ನೀಡಿದ ಉತ್ತರವನ್ನು ಹಝ್ರ್‌ರತ್ ಉಬಯ್ಯ್‌ರೊಡನೆ(ರ) ಹೇಳಿದರು. ಹಝ್ರ್‌ರತ್ ಉಬಯ್ಯ್(ರ) ಆ ಸ್ತ್ರೀಯೊಡನೆ ಹೇಳಿದರು: ಹೋಗು, ಮಗುವಿನ ಜನನದ ನಂತರ ಇದ್ದತ್ ಪೂರ್ತಿ ಮಾಡುವ ಆವಶ್ಯಕತೆಯಿಲ್ಲವೆಂದು ಉಬಯ್ಯ್ ಹೇಳುತ್ತಿದ್ದಾರೆ ಎಂದು ಹಝ್ರ್‌ರತ್ ಉಮರ್‌ರೊಡನೆ ಹೇಳು. ಅವರು ನನ್ನ ಬಗ್ಗೆ ಕೇಳಿದರೆ, ನಾನು ಇಲ್ಲೇ ಇದ್ದೇನೆ. ಬಂದು ಕರೆದರೆ ಆಯಿತು. ಆ ಸ್ತ್ರೀ ಹಝ್ರ್‌ರತ್ ಉಮರರ(ರ) ಸಮೀಪಕ್ಕೆ ಹೋದರು. ಹಝ್ರ್‌ರತ್ ಉಮರ್(ರ) ಹೇಳಿದರು. ಹಝ್ರ್‌ರತ್ ಉಬಯ್ಯ್‌ರನ್ನು ಕರೆದುಕೊಂಡು ಬಾ. ಹಝ್ರ್‌ರತ್ ಉಬಯ್ಯ್ ಬಂದರು. 'ನೀವು ಎಲ್ಲಿಂದ ಇದನ್ನು ಹೇಳಿದ್ದೀರಿ ಎಂದು ಹಝ್ರ್‌ರತ್ ಉಮರ್(ರ) ಕೇಳಿದರು. ಪವಿತ್ರ ಖುರ್‌ಆನಿನಿಂದ ಎಂದು ಹಝ್ರ್‌ರತ್ ಉಬಯ್ಯ್(ರ) ಹೇಳಿದರು. ಅನಂತರ ಈ ಆಯತನ್ನು ಓದಿದರು: **ವಉಲಾತುಲ್ ಅಹ್‌ಮಾಲು ಅಜಲುಹುನ್ನ ಅನ್‌ಯಝ್ಅ್‌ನ ಹಮ್‌ಲಹುನ್ನ**. ಎಂದರೆ, ಗರ್ಭಿಣಿ ಸ್ತ್ರೀಯರಾದರೆ, ಹೆರುವ ತನಕ ಅವರ ಗಡುವು(ಇದ್ದತ್ ಕಾಲ) ಆಗಿದೆ. ಅದರ ನಂತರ ಹೇಳಿದರು: ಗರ್ಭಿಣಿಯಾದ ಸ್ತ್ರೀ ವಿಧವೆಯಾದರೆ, ಅವರು ಸಹ ಇದರಲ್ಲಿ ಒಳಪಡುತ್ತಾರೆ. ನಾನು ಹಝ್ರ್‌ರತ್ ಪೈಗಂಬರರಿಂದ(ಸ) ಇದರ ಬಗ್ಗೆ ಹದೀಸನ್ನು ಕೇಳಿದ್ದೇನೆ. ಹಝ್ರ್‌ರತ್ ಉಮರ್(ರ) ಆ ಸ್ತ್ರೀಯೊಡನೆ ಹೇಳಿದರು: ಉಬಯ್ಯ್ ಹೇಳುವುದನ್ನು ಕೇಳು, ಎಂದರೆ, ಇದೇ ಸರಿ, ಅದರಂತೆ ಮಾಡು. ಹಝ್ರ್‌ರತ್ ಉಬಯ್ಯ್ ಹೇಳಿದಂತೆ ಮಾಡು.

ಹಝ್ರ್‌ರತ್ ಪೈಗಂಬರರ(ಸ) ಚಿಕ್ಕಪ್ಪರಾದ ಹಝ್ರ್‌ರತ್ ಅಬ್ಬಾಸ್‌ರ ಮನೆ ಮಸ್ಜಿದ್ ನಬವಿಗೆ ಸೇರಿಕೊಂಡು ನಿರ್ಮಿಸಲಾಗಿತ್ತು. ಹಝ್ರ್‌ರತ್ ಉಮರ್(ರ) ಮಸೀದಿಯನ್ನು ವಿಸ್ತಾರಗೊಳಿಸಲು ಬಯಸಿದ್ದರು. ಅವರು ಹಝ್ರ್‌ರತ್ ಅಬ್ಬಾಸ್‌ರೊಡನೆ ಹೇಳಿದರು: ನೀವು ನಿಮ್ಮ ಮನೆಯನ್ನು ಮಾರಾಟ ಮಾಡಿರಿ. ನಾನು ಅದನ್ನು ಮಸೀದಿಯೊಂದಿಗೆ ಸೇರಿಸುವೆನು. ಹಝ್ರ್‌ರತ್ ಅಬ್ಬಾಸ್ ಹೇಳಿದರು: ಇದು ಆಗಲಿಕ್ಕಿಲ್ಲ. ಹಝ್ರ್‌ರತ್ ಉಮರ್(ರ) ಹೇಳಿದರು: ಸರಿ ಅದನ್ನು ಕೊಡುಗೆಯಾಗಿ ಕೊಡು. ಹಝ್ರ್‌ರತ್ ಅಬ್ಬಾಸ್(ರ) ಅದನ್ನು ಸಹ ಸಮ್ಮತಿಸಲಿಲ್ಲ. ಹಝ್ರ್‌ರತ್ ಅಬ್ಬಾಸ್(ರ) ತನ್ನ ಇಷ್ಟ ಬಂದಂತೆ ನಡೆಯುವ ವ್ಯಕ್ತಿಯಾಗಿದ್ದರು. ಹಝ್ರ್‌ರತ್ ಉಮರ್(ರ) ಹೇಳಿದರು: ಸರಿ, ನೀವು ಸ್ವತಃ ಮಸೀದಿಯನ್ನು ವಿಸ್ತೃತಗೊಳಿಸಿರಿ. ತುಂಬಾ ಚೆನ್ನಾಗಿರುವುದು. ಉಮ್ಮತಿಗಾಗಿ ನಿಮ್ಮ ವತಿಯಿಂದ ಮಸೀದಿ ವಿಶಾಲವಾದಂತೆಯೂ ಆಗುವುದು. ನಿಮ್ಮ ಮನೆಯನ್ನು ಅದರಲ್ಲಿ ಒಳಪಡಿಸಿರಿ. ಅಬ್ಬಾಸ್ ಹೇಳಿದರು: ಇದು ಸಹ ಸಾಧ್ಯವಲ್ಲ. ಅದನ್ನು ಸಹ ಅವರು ಸಮ್ಮತಿಸಲಿಲ್ಲ. ಹಝ್ರ್‌ರತ್ ಉಮರ್(ರ) ಹೇಳಿದರು: ಈ ಮೂರು ಸಂಗತಿಗಳಲ್ಲಿ ಒಂದನ್ನು ಸಮ್ಮತಿಸಬೇಕಾಗುವುದು. ಹಝ್ರ್‌ರತ್ ಅಬ್ಬಾಸ್(ರ) ಹೇಳಿದರು: ನಾನು ಯಾವುದನ್ನೂ ಸಮ್ಮತಿಸುವುದಿಲ್ಲ. ಕೊನೆಗೆ ಅವರು ಹಝ್ರ್‌ರತ್ ಉಬಯ್ಯ್ ಬಿನ್ ಕಅ್‌ಬ್‌ರನ್ನು ತಮ್ಮ ತೀರ್ಪುಗಾರರನ್ನಾಗಿ ಮಾಡಿದರು. ತೀರ್ಪುಗಾರರಾದ ಉಬಯ್ಯ್‌ರಿಗೆ ಎಲ್ಲ ಸಂಗತಿಯನ್ನು ಹೇಳಿಕೊಟ್ಟರು. ಹಝ್ರ್‌ರತ್ ಉಬಯ್ಯ್(ರ) ಉಮರ್‌ರೊಡನೆ(ರ) ಕೇಳಿದರು: ಅವರ ಸಮ್ಮತಿಯಿಲ್ಲದೆ ಅವರ ವಸ್ತುವನ್ನು ಪಡೆಯಲು ನಿಮಗೆ ಏನು ಅವಕಾಶವಿದೆ. ನೀವು ಅದನ್ನು ಅವರಿಂದ ತೆಗೆಯಬಾರದು. ಹಝ್ರ್‌ರತ್ ಉಮರ್(ರ) ಹೇಳಿದರು: ನೀವು ಈ ತೀರ್ಪನ್ನು ಪವಿತ್ರ ಖುರ್‌ಆನ್ ಅಥವಾ ಹದೀಸ್‌ಗಳ ಆಧಾರದಲ್ಲಿ ಮಾಡಿದ್ದೀರಾ? ಹಝ್ರ್‌ರತ್ ಉಬಯ್ಯ್ ಹೇಳಿದರು: ಹೌದು ಹದೀಸಿನ ಆಧಾರದಿಂದ ಮಾಡಿದ್ದೇನೆ. ಅದೇನೆಂದರೆ, ಹಝ್ರ್‌ರತ್ ಸುಲೈಮಾನ್(ಅ) ಬೈತುಲ್ ಮುಖದ್ದಸ್ಸಿನ ಕಟ್ಟಡ ನಿರ್ಮಿಸಿದಾಗ, ಅದರ ಒಂದು ಗೋಡೆ, ಬೇರೆ ಯಾರದ್ದೋ ಭೂಮಿಯಲ್ಲಿ ಮಾಡಲಾಗಿತ್ತು. ಅದು ಬಿದ್ದುಹೋಯಿತು. ಅದರ ಮಾಲಿಕರ ಅನುಮತಿ ಪಡೆದು ನಿರ್ಮಿಸಲು ಹಝ್ರ್‌ರತ್ ಸುಲೈಮಾನ್‌ರಿಗೆ ದಿವ್ಯವಾಣಿ ಮೂಲಕ ತಿಳಿಸಲಾಯಿತು. ಇದನ್ನು ಕೇಳಿದಾಗ, ಹಝ್ರ್‌ರತ್ ಉಮರ್(ರ), ಸುಮ್ಮನಾದರು. ಆದರೆ, ಹೇಗಿದ್ದರೂ ಹಝ್ರ್‌ರತ್ ಅಬ್ಬಾಸ್‌ರಿಗೆ(ರ) ಖಿಲಾಫತ್‌ಗಾಗಿ ನಿಷ್ಠೆ ಮತ್ತು ಪ್ರಾಮಾಣಿಕತೆಯಿತ್ತು. ಖಿಲಾಫತಿಗಾಗಿ, ನಿಷ್ಠೆಯ ಪ್ರತಿಜ್ಞೆ ಸಹ ಮಾಡಿದ್ದರು. ತನ್ನ ಮನಸ್ಸಲ್ಲಿ ಅದರ ಚಿಂತೆ ಸಹ ಬಂತು. ಒಂದು ಸಲ ನಿರಾಕರಿಸಿದ್ದರು. ಆದರೆ ಅವರಲ್ಲಿ ಧರ್ಮಶೀಲತೆ ಮತ್ತು ದೇವಭಕ್ತಿ ಇತ್ತು. ಧರ್ಮದ ಮೇಲೆ ಅಭಿಮಾನ ಸಹ ಇತ್ತು ಹಾಗೂ ಖಿಲಾಫತಿನ ಮೇಲೆ ಗೌರವಾದರವೂ ಇತ್ತು. ಅದು ಕೊನೆಗೆ ಹೊರಗೆ ಬಂತು. ಹಝ್ರ್‌ರತ್ ಉಮರ್(ರ) ಹಝ್ರ್‌ರತ್ ಉಬಯ್ಯ್‌ರ ಮಾತನ್ನು ಸಮ್ಮತಿಸಿ ಸುಮ್ಮನಾದಾಗ, ಹಝ್ರ್‌ರತ್ ಅಬ್ಬಾಸ್(ರ) ಹೇಳಿದರು: ಸರಿ, ನಾನು ನನ್ನ ಮನೆಯನ್ನು ಮಸೀದಿಯೊಂದಿಗೆ ಸೇರಿಸುತ್ತೇನೆ. (ಸೈರುಸ್ಸಹಾಬ, ಸಂಪುಟ–3, ಪುಟ–153, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಒಂದು ಬಾರಿ ಹಜ್ಜೇ ತಮತ್ತುಅ್‌ನಿಂದ ಜನರನ್ನು ತಡೆಯಲು ಹಝ್ರ್‌ರತ್ ಉಮರ್(ರ) ನಿರ್ಧರಿಸಿದ್ದರು. ಮೂರು ವಿಧದ ಹಜ್ಜ್‌ಗಳು ಇವೆ. ಒಂದು ಹಜ್ಜೇ ಮುಫ್‌ರದ್, ಎರಡನೆಯದ್ದು ಹಜ್ಜ್ ತಮತ್ತುಅ್, ಮೂರನೆಯದ್ದು ಹಜ್ಜೇ ಖಿರಾನ್. ಕೆಲವು ಯುವಕರಿಗೆ ಗೊತ್ತಿರಲಿಕ್ಕಿಲ್ಲ. ಹಜ್ಜೇ ತಮತ್ತುಅ್ ಎಂದರೆ, ಉಮ್ರದ ಇಹ್‌ರಾಮನ್ನು ಕಟ್ಟಿ ಮಕ್ಕಗೆ ತಲುಪಿ, ಮೊದಲು ಉಮ್ರ ಮಾಡಲಾಗುತ್ತದೆ. ಅನಂತರ ಇಹ್‌ರಾಮ್ ತೆರೆಯಲಾಗುತ್ತದೆ. ಅನಂತರ ಎಂಟನೇ ಝುಲ್‌ಹಜ್ಜಿಗೆ ಹೊಸ ಇಹ್‌ರಾಂ ಕಟ್ಟಲಾಗುತ್ತದೆ. ಅನಂತರ ಹಜ್ಜ್ ಮಾಡಲಾಗುತ್ತದೆ. ಇದನ್ನು ಹಜ್ಜೇ ತಮತ್ತುಅ್ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಮಾಡಲಾಗುವ ಹಜ್ಜನ್ನು ಹಜ್ಜೇ ಮುಫ್‌ರದ್ ಎಂದು ಹೇಳಲಾಗುತ್ತದೆ. ಹಜ್ಜೇ ಖಿರಾನ್ ಎಂದರೆ, ಉಮ್ರ ಮತ್ತು ಹಜ್ಜನ್ನು ಒಂದೇ ಇಹ್‌ರಾಮಿನಲ್ಲಿ ಮಾಡುವುದು. ಹೇಗಿದ್ದರೂ ಹಝ್ರ್‌ರತ್ ಉಮರ್(ರ) ಹಜ್ಜೇ ತಮತ್ತುಅ್‌ವನ್ನು ತಡೆಯಲು ಹಝ್ರ್‌ರತ್ ಉಮರ್(ರ) ನಿರ್ಧರಿಸಿದ್ದರು. ಅದನ್ನು ತಡೆಯಲು ನಿಮಗೆ ಯಾವುದೇ ಅಧಿಕಾರವಿಲ್ಲವೆಂದು ಹಝ್ರ್‌ರತ್ ಉಬಯ್ಯ್(ರ) ಹೇಳಿದರು. ಅದನ್ನು ತಡೆಯುವುದು ತಪ್ಪೆಂದು ಅವರು ಹೇಳಿದರು. ಹೀಗೆ ಹಝ್ರ್‌ರತ್ ಉಮರ್(ರ) ಹಜ್ಜೇ ತಮತ್ತುಅ್‌ವನ್ನು ತಡೆಯುವುದರಿಂದ ಹಿಂದೆಸರಿದರು. ಕೂಫದಿಂದ ಮೂರು ಮೈಲುಗಳ ದೂರದಲ್ಲಿರುವ ನಜದ್‌ನ ಪ್ರದೇಶದಲ್ಲಿ ಒಂದು ಪಟ್ಟಣವಿದೆ. ಅಲ್ಲಿ ತಯಾರಿಸಲಾಗುವ ಮುಂಡಾಸು ಧರಿಸುವುದನ್ನು ತಡೆಯಲು ಒಂದು ಸಲ ಹಝ್ರ್‌ರತ್ ಉಮರ್(ರ) ನಿರ್ಧರಿಸಿದ್ದರು. ಏಕೆಂದರೆ, ಅದರ ಬಣ್ಣದಲ್ಲಿ ಮೂತ್ರದ ಮಿಶ್ರಣವಿರುತ್ತಿತ್ತು ಅಥವಾ ಬಹುಶಃ ಆ ಬಣ್ಣವನ್ನು ತಯಾರಿಸಲು ಯಾವುದಾದರೂ ಮೃಗದ ಮೂತ್ರವನ್ನು ಸೇರಿಸಲಾಗುತ್ತದೆ ಎಂದು ತೋರುತ್ತದೆ. ಹೇಗಿದ್ದರೂ, ಇದನ್ನು ಸಹ ತಡೆಯಲು ನಿಮಗೆ ಅಧಿಕಾರವಿಲ್ಲವೆಂದು ಹಝ್ರ್‌ರತ್ ಉಬಯ್ಯ್(ರ) ಹೇಳಿದರು. ಏಕೆಂದರೆ, ಸ್ವತಃ ಹಝ್ರ್‌ರತ್ ಪೈಗಂಬರ್(ಸ) ಆ ಬಣ್ಣದ ಬಟ್ಟೆಗಳನ್ನು ಮತ್ತು ಅಲ್ಲಿಯ ಮುಂಡಾಸುಗಳನ್ನು ಧರಿಸುತ್ತಿದ್ದರು. ಹಝ್ರ್‌ರತ್ ಪೈಗಂಬರರ(ಸ) ಕಾಲಘಟ್ಟದಲ್ಲಿ ಸಹಾಬರು ಸಹ ಧರಿಸುತ್ತಿದ್ದರು. ಅದನ್ನು ಎಂದೂ ತಡೆಯಲಾಗಿಲ್ಲ. ಇದನ್ನು ಕೇಳಿದಾಗ, ಹಝ್ರ್‌ರತ್ ಉಮರ್(ರ) ಸುಮ್ಮನಾದರು. ನೀವು ಸರಿಯಾಗಿ ಹೇಳಿದ್ದೀರಿ ಎಂದು ಹಝ್ರ್‌ರತ್ ಉಮರ್(ರ) ಹೇಳಿದರು. (ಸೈರುಸ್ಸಹಾಬ, ಸಂಪುಟ–3, ಪುಟ–156, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್) (ಮುಜಮುಲ್ ಬಲದಾನ್, ಸಂಪುಟ–2, ಪುಟ–328) (ಫಿಖಹ್ ಅಹ್ಮದಿಯಾ, ಸಂಪುಟ–1, ಪುಟ–335–336)

ಒಂದು ಸಲ ಹಝ್ರ್‌ರತ್ ಉಮರರ(ರ) ಖಿಲಾಫತ್ ಕಾಲಘಟ್ಟದಲ್ಲಿ ಒಂದು ತೋಟದ ವಿಷಯದಲ್ಲಿ ಹಝ್ರ್‌ರತ್ ಉಮರ್(ರ) ಮತ್ತು ಹಝ್ರ್‌ರತ್ ಉಬಯ್ಯ್‌ರ(ರ) ನಡುವೆ ಭಿನ್ನಾಭಿಪ್ರಾಯವುಂಟಾಯಿತು. 'ನಿಮ್ಮ ಖಿಲಾಫತ್ ಕಾಲದಲ್ಲಿ ಇಂತಹ ಘಟನೆಯೇ ಎಂದು ಹೇಳಿ ಹಝ್ರ್‌ರತ್ ಉಬಯ್ಯ್(ರ) ಅತ್ತರು. ಹಝ್ರ್‌ರತ್ ಉಮರ್(ರ) ಹೇಳಿದರು: ನನ್ನ ಉದ್ದೇಶ ಇದಲ್ಲ. (ಎಂದರೆ ಅಧಿಕಾರದ ಬಲದಿಂದ ನಾನು ಅದನ್ನು ಪಡೆಯಲು ಉದ್ದೇಶಿಸುವುದಿಲ್ಲ). ನೀವು ನಿಮಗೆ ಇಷ್ಟವಿರುವ ಮುಸ್ಲಿಮನಿಂದ ಇದರ ಬಗ್ಗೆ ತೀರ್ಪು ಮಾಡಿಸಿರಿ. ನಮ್ಮ ಮಧ್ಯೆ ಇದರ ಬಗ್ಗೆ ಭಿನ್ನತೆಯಿದೆ.ನಾನು ಇದರ ಬಗ್ಗೆ ಯಾವುದೇ ಆಜ್ಞೆಯನ್ನು ನೀಡುತ್ತಿಲ್ಲ. ನೀವೇ ಯಾರಿಂದಲೂ ಇದರ ಬಗ್ಗೆ ತೀರ್ಪು ಮಾಡಿಸಿರಿ. ಏಕೆಂದರೆ, ನನ್ನ ಅಭಿಪ್ರಾಯ ಸರಿಯೆಂದು ನಾನು ಭಾವಿಸುತ್ತಿದ್ದೇನೆ. ಹಝ್ರ್‌ರತ್ ಉಬಯ್ಯ್(ರ) ಹಝ್ರ್‌ರತ್ ಝೈದ್ ಬಿನ್ ಸಾಬಿತ್‌ರ ಹೆಸರು ಹೇಳಿ, ಅವರಿಂದ ತೀರ್ಪು ಮಾಡುವ ಎಂದು ಹೇಳಿದರು. ಹಝ್ರ್‌ರತ್ ಉಮರ್(ರ) ಸಮ್ಮತಿಸಿದರು. ಹಝ್ರ್‌ರತ್ ಝೈದ್‌ರ ಮುಂದೆ ಮೊಕದ್ದಮೆ ಇರಿಸಲಾಯಿತು. ಹಝ್ರ್‌ರತ್ ಉಮರ್(ರ) ಇಸ್ಲಾಮಿನ ಖಲೀಫರಾಗಿದ್ದರು. ಆದಾಗ್ಯೂ ಒಬ್ಬ ವಾದಿ ಅಥವಾ ಒಂದು ಪಕ್ಷದ ಫಿರ್ಯಾದಿದಾರ ಎಂಬ ನೆಲೆಯಲ್ಲಿ ಹಝ್ರ್‌ರತ್ ಝೈದ್ ಬಿನ್ ಸಾಬಿತ್‌ರ ನ್ಯಾಯಪೀಠದಲ್ಲಿ ಹಾಜರಾದರು. ಹಝ್ರ್‌ರತ್ ಉಮರ್(ರ) ಹಝ್ರ್‌ರತ್ ಉಬಯ್ಯ್‌ರ ವಾದವನ್ನು ನಿರಾಕರಿಸುತ್ತಿದ್ದರು. ಹಝ್ರ್‌ರತ್ ಉಮರ್(ರ) ಹಝ್ರ್‌ರತ್ ಉಬಯ್ಯ್‌ರೊಡನೆ(ರ) ಹೇಳಿದರು: ನೀವು ಮರೆತುಬಿಟ್ಟಿದ್ದೀರಿ. ಯೋಚಿಸಿರಿ, ನೆನಪು ಮಾಡಿಕೊಳ್ಳಿರಿ. ಹಝ್ರ್‌ರತ್ ಉಬಯ್ಯ್(ರ) ಸ್ವಲ್ಪ ಸಮಯ ಯೋಚಿಸಿದ ನಂತರ ಹೇಳಿದರು: ನನಗೆ ಏನೂ ನೆನಪಿಗೆ ಬರುತ್ತಿಲ್ಲ. ಆಗ ಹಝ್ರ್‌ರತ್ ಉಮರ್(ರ) ಘಟನೆಯ ಎಲ್ಲ ವಿವರವನ್ನು ವಿಶದವಾಗಿ ಹೇಳಿದರು. ಹೀಗೆಲ್ಲ ನಡೆದಿತ್ತು ಎಂದು. ಹಝ್ರ್‌ರತ್ ಝೈದ್(ರ) ಹಝ್ರ್‌ರತ್ ಉಬಯ್ಯ್‌ರೊಡನೆ(ರ) ಕೇಳಿದರು: ನಿಮ್ಮ ಬಳಿ ನಿಮ್ಮ ವಾದಕ್ಕಿರುವ ಸಬೂತು ಏನಿದೆ. ಹಝ್ರ್‌ರತ್ ಉಬಯ್ಯ್(ರ) ಹೇಳಿದರು: ಈಗ ನನ್ನ ಬಳಿ ಯಾವುದೇ ಪುರಾವೆಗಳಿಲ್ಲ. ನೀವು ಅಮೀರುಲ್ ಮೂಅ್‌ಮಿನೀನ್‌ರಿಂದ ಆಣೆ ಹಾಕಿಸಿರಿ.

ಹಝ್ರತ್ ಉಮರ್(ರ) ಹೇಳಿದರು: ಆಣೆ ಹಾಕುವುದು ಆವಶ್ಯವೆಂದಾದರೆ, ನನಗೆ ಆಣೆ ಹಾಕುವುದರಲ್ಲಿ ಯಾವುದೇ ಚಿಂತೆಯಿಲ್ಲ, ಯಾವುದೇ ಅಡೆತಡೆಗಳು ಇಲ್ಲ. ಬೇಕಾದರೆ ಆಣೆ ಹಾಕುತ್ತೇನೆ. ಹೇಗಿದ್ದರೂ, ಇದರ ನಂತರ ಆಗಬೇಕಿದ್ದ ತೀರ್ಮಾನವಾಯಿತು. (ಸೈರುಸ್ಸಹಾಬ, ಸಂಪುಟ-3, ಪುಟ-145-146, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಪವಿತ್ರ ಖುರ್‌ಆನ್ ಸಂಗ್ರಹಿಸಲು ಖುರೈಶ್ ಮತ್ತು ಅನ್ಸಾರರ ಹನ್ನೆರಡು ವ್ಯಕ್ತಿಗಳನ್ನು ಆಯ್ಕೆ ಮಾಡಿದ್ದರು. ಅದರಲ್ಲಿ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಮತ್ತು ಹಝ್ರತ್ ಝೈದ್ ಬಿನ್ ಸಾಬಿತ್(ರ) ಒಳಪಟ್ಟಿದ್ದರು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-1, ಪುಟ-381, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಉಸ್ಮಾನ‌ರ(ರ) ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನಿನ ಶೈಲಿ ಮತ್ತು ಉಚ್ಚಾರಣೆಯ ಬಗ್ಗೆ ಭಿನ್ನಾಭಿಪ್ರಾಯಗಳು ಪೂರ್ತಿ ದೇಶದಲ್ಲಿ ವರ್ಧಿಸಿದ್ದುವು. ಆದ್ದರಿಂದ ಅವರು ಈ ಭಿನ್ನಾಭಿಪ್ರಾಯಗಳನ್ನು ದೂರಮಾಡಲು ಇಚ್ಛಿಸಿದ್ದರು. ಖಿರಅತ್ ಮಾಡುವ ವಿಶಿಷ್ಟ ವ್ಯಕ್ತಿಗಳನ್ನು ಕರೆದು, ಪ್ರತಿಯೊಬ್ಬರಿಂದ ಬೇರೆ ಬೇರೆಯಾಗಿ ಪವಿತ್ರ ಖುರ್‌ಆನ್ ಓದಿಸಿದರು. ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ), ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ) ಮತ್ತು ಹಝ್ರತ್ ಮುಆಧ್ ಬಿನ್ ಜಬಲ್(ರ) ಇವರೆಲ್ಲರ ಶೈಲಿಯಲ್ಲಿ ಭಿನ್ನತೆಯನ್ನು ಕಂಡರು. ಇದನ್ನು ನೋಡಿ ಹಝ್ರತ್ ಉಸ್ಮಾನ್(ರ) ಹೇಳಿದರು: ನಾನು ಎಲ್ಲ ಮುಸ್ಲಿಮರನ್ನು ಒಂದು ಉಚ್ಚಾರದ ಖುರ್‌ಆನಿಗೆ ತಂದು ಸೇರಿಸಲು ಇಚ್ಛಿಸುತ್ತೇನೆ. ಖುರೈಶ್‌ಗಳು ಮತ್ತು ಅನ್ಸಾರರಲ್ಲಿ ಹನ್ನೆರಡು ವ್ಯಕ್ತಿಗಳಿಗೆ ಪವಿತ್ರ ಖುರ್‌ಆನಿನ ಮೇಲೆ ಸಂಪೂರ್ಣವಾದ ಹಿಡಿತ ಮತ್ತು ನೈಪುಣ್ಯವಿತ್ತು. ಈ ಮುಖ್ಯವಾದ ಕೆಲಸವನ್ನು ಹಝ್ರತ್ ಉಸ್ಮಾನ್(ರ) ಈ ಜನರಿಗೆ ಒಪ್ಪಿಸಿದರು. ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಗೆ(ರ) ಈ ಸಂಘದ ನೇತೃತ್ವ ವಹಿಸಿಕೊಟ್ಟರು. ಹಝ್ರತ್ ಉಬಯ್ಯ್(ರ) ಪವಿತ್ರ ಖುರ್‌ಆನಿನ ಪದಗಳನ್ನು ಹೇಳುತ್ತಾ ಹೋಗುತ್ತಿದ್ದರು ಮತ್ತು ಹಝ್ರತ್ ಝೈದ್(ರ) ಅದನ್ನು ಬರೆಯುತ್ತಾ ಹೋಗುತ್ತಿದ್ದರು. ಇಂದು ಇರುವ ಪವಿತ್ರ ಖುರ್‌ಆನಿನ ಪ್ರತಿಗಳೆಲ್ಲವೂ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರ(ರ) ಖಿರಾತ್ ಅಥವಾ ಪಠನ ಪ್ರಕಾರವಿರುವುದಾಗಿದೆ. (ಸೈರುಸ್ಸಹಾಬ, ಸಂಪುಟ-3, ಪುಟ-143, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಉತ್‌ಬ ಬಿನ್ ಝುಮ್ರ ಹೇಳುತ್ತಾರೆ: ನಾನು ಉಬಯ್ ಬಿನ್ ಕಅ್‌ಬ್‌ರೊಡನೆ(ರ) ಹೇಳಿದೆ. ಹಝ್ರತ್ ಪೈಗಂಬರರ(ಸ) ಸಹಾಬಿಯರಾಗಿರುವ ನಿಮಗೆಲ್ಲ ಏನಾಗಿದೆ. ನಿಮ್ಮಿಂದ ಏನಾದರೂ ಮಾಹಿತಿಗಳು, ಸಂಗತಿಗಳು, ಘಟನೆಗಳನ್ನು ಕೇಳಿ ತಿಳಿಯಲು ಮತ್ತು ನಿಮ್ಮಿಂದ ಏನಾದರೂ ಕಲಿಯಲಿಕ್ಕಾಗಿ ನಾವು ದೂರದೂರದಿಂದ ಬರುತ್ತೇವೆ. ಆದರೆ ನೀವು ನಮಗೆ ಯಾವುದೇ ಬೆಲೆ ಮತ್ತು ನೆಲೆವಿಲ್ಲವೆಂಬಂತೆನಮ್ಮ ಮಾತನ್ನು ಸಾಧಾರಣ ಸಂಗತಿಯೆಂದು ಭಾವಿಸುತ್ತೀರಿ.ಆಗ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಹೇಳಿದರು: ಅಲ್ಲಾಹನಾಣೆ, ಮುಂದಿನ ಜುಮಾ ದಿನದ ವರೆಗೆ ನಾನು ಜೀವಂತವಾಗಿದ್ದರೆ, ನಾನು ನಿಮಗೆ ಎಂತಹ ಸಂಗತಿಯನ್ನು ಹೇಳುತ್ತೇನೆಂದರೆ, ಅದರ ನಂತರ ನೀವು ನನ್ನನ್ನು ಜೀವಂತವಾಗಿ ಬಾಕಿಯಿರಿಸುತ್ತೀರೋ ಅಥವಾ ಕೊಲ್ಲುತ್ತೀರೋ ಎಂಬುವುದರ ಬಗ್ಗೆ ನನಗೆ ಪರಿವೆಯಿಲ್ಲ. ಜುಮಾ ದಿವಸ ಬಂದಾಗ, ನಾನು ಮದೀನಕ್ಕೆ ಹೋದೆನು. ಜನರು ಗುಂಪು ಗುಂಪಾಗಿ ಬೀದಿಗಳಲ್ಲಿ ಹೋಗುತ್ತಿರುವುದನ್ನು ನಾನು ಕಂಡೆನು. ಈ ಜನರಿಗೆ ಏನಾಗಿದೆ ಎಂದು ನಾನು ಒಬ್ಬರೊಡನೆ ಕೇಳಿದೆ. ಅವರು ಹೇಳಿದರು: ನೀವು ಈ ಪಟ್ಟಣದವನಲ್ಲವೇ? ಅಲ್ಲವೆಂದು ನಾನು ಉತ್ತರಿಸಿದೆ. ಆಗ ಅವರು ಹೇಳಿದರು: ಇಂದು ಮುಸ್ಲಿಮರ ಸರದಾರ ಉಬಯ್ಯ್ ಬಿನ್ ಕಅ್‌ಬ್(ರ) ನಿಧನರಾಗಿರುವರು. ಆಗ ನಾನು ಹೇಳಿದೆ: ಅಲ್ಲಾಹನಾಣೆ, ಈ ವ್ಯಕ್ತಿ ಹೇಳುವುದನ್ನು, ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಹೇಳುವುದನ್ನು ಅಲ್ಲಾಹನು ತಡೆದ ರೀತಿಯಲ್ಲಿ ಯಾರ ಮಾತನ್ನು ಅಲ್ಲಾಹನು ತಡೆದದ್ದಾಗಿ ನಾನು ಇಂದಿನ ವರೆಗೆ ಕಂಡಿಲ್ಲ.
(ಅತ್ತಬಖಾತುಲ್ ಕುಬ್ರ ಲಿಇಬ್‌ನೆ ಸಅದ್, ಸಂಪುಟ-3, ಪುಟ-380, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಹೇಳಿದ್ದರಲ್ಲವೇ: ನಾನು ಮುಂದಿನ ಜುಮಾ ದಿವಸ ಒಂದು ಸಂಗತಿಯನ್ನು ಹೇಳುತ್ತೇನೆ. ಅದರ ನಂತರ ನೀವು ನನ್ನನ್ನು ಕೊಂದರೂ ಬಿಟ್ಟರೂ ನನಗೆ ಪರಿವೆಯಿಲ್ಲವೆಂದು. ಹಝ್ರತ್ ಉಬಯ್ಯ್ ಬಿನ್ ಕಅ್‌ಬ್ ಮನಸ್ಸಾರೆ ಹೇಳಲು ಇಷ್ಟಪಡದ ಸಂಗತಿಯನ್ನು ಹೇಳುವುದರಿಂದ ಅಲ್ಲಾಹನು ಅವರನ್ನು ರಕ್ಷಿಸಿದನು ಎಂಬುವುದಾಗಿರಬಹುದು ಆ ವ್ಯಕ್ತಿಯ ಮಾತಿನ ಉದ್ದೇಶ. ಹೇಗಿದ್ದರೂ ಆ ವ್ಯಕ್ತಿಯ ಮಾತಿನ ಸರಿಯಾದ ಉದ್ದೇಶ ಏನಾಗಿರಬಹುದೆಂದು ಅಲ್ಲಾಹನೇ ಬಲ್ಲನು.

ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ವರದಿ ಮಾಡುತ್ತಾರೆ: ನಾನು ಎಂಟು ರಾತ್ರಿಗಳಲ್ಲಿ ಪವಿತ್ರ ಖುರ್‌ಆನ್ ಪೂರ್ತಿಯಾಗಿ ಓದಿ ಮುಗಿಸುತ್ತೇನೆ. (ಅತ್ತಬಖಾತುಲ್ ಕುಬ್ರ ಲಿಇಬ್‌ನೆ ಸಅದ್, ಸಂಪುಟ-3, ಪುಟ-379, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಪೈಗಂಬರ್(ಸ) ಮಸ್ಜಿದ್ ನಬವಿಯ ಕಂಬಗಳಲ್ಲಿ ಖರ್ಜೂರದ ಒಂದು ಕೊಂಬೆಯೊಂದಿಗೆ ನಿಂತುಕೊಂಡು ಖುತ್‌ಬ ನೀಡುತ್ತಿದ್ದರು. ಅನಂತರ ಹಝ್ರತ್ ಪೈಗಂಬರರಿಗೆ(ಸ) ಮಿಂಬರ್ ತಯಾರಿಸಲಾಯಿತು. ಪೈಗಂಬರ್(ಸ) ಜುಮಾ ದಿವಸ ಅದರಲ್ಲಿ ಕುಳಿತುಕೊಂಡು ಖುತ್‌ಬ ನೀಡಲು ಶುರುಮಾಡಿದಾಗ, ಆ ಕಂಬದಿಂದ ಕಿರುಚಾಟದ ಶಬ್ದ ಕೇಳಿಬಂತು, ಅದನ್ನು ಮಸೀದಿಯಲ್ಲಿದ್ದ ಎಲ್ಲರೂ ಆಲಿಸಿದರು. (ಇದು ಒಂದೇ ಸಮಯದಲ್ಲಿ ಎಲ್ಲರೂ ಒಟ್ಟಿಗೆ ಕಾಣುವಂತಹ ದಿವ್ಯದರ್ಶನದ ಒಂದು ರೂಪವಾಗಿದೆ – ಅನುವಾದಕ) ಹಝ್ರತ್ ಪೈಗಂಬರ್(ಸ) ಆ ಕಂಬದ ಬಳಿಗೆ ಬಂದರು. ಅನಂತರ ಅದನ್ನು ಆಲಂಗಿಸಿದರು. ಆಗ ಆ ಕೊಂಬೆ ಮುಗ್ಧ ಮಗುವಿನ ಹಾಗೆ ಅಳಲು ಆರಂಭಿಸಿತು.ಅದಕ್ಕೆ ಸಾಂತ್ವನ ನೀಡಿದಾಗ, ಅದು ಸಮಾಧಾನಗೊಂಡಿತು ಮತ್ತು ಅದರಿಂದ ಶಬ್ದ ಬರುವುದು ನಿಂತುಹೋಯಿತು. ನಂತರ ಕಾಲದಲ್ಲಿ ಆ ಮಸೀದಿಯನ್ನು ಕೆಡವಿಹಾಕಿ ಅದರಲ್ಲಿ ಬದಲಾವಣೆ ಉಂಟುಮಾಡಲಾದಾಗ, ಹಝ್ರತ್ ಪೈಗಂಬರ್(ಸ) ಆ ಕೊಂಬೆಯ ಆಸರೆ ಪಡೆದು ನಿಂತುಕೊಳ್ಳುತ್ತಿದ್ದರು ಎಂಬ ಒಂದೇ ಒಂದು ಕಾರಣದಿಂದ ಆ ಮರದ ಕಾಂಡವನ್ನು ತೆಗೆದು ಹಝ್ರತ್ ಉಬಯ್ಯ್(ರ) ತನ್ನ ಮನೆಗೆ ಕೊಂಡುಹೋದರು. ಗೆದ್ದಲು ತಿಂದ ಕಾರಣದಿಂದ ಜೀರ್ಣಾವಸ್ಥೆಗೆ ತಲುಪಿದ್ದರೂ ಅವರು ಅದನ್ನು ತನ್ನ ಬಳಿಯೇ ಇರಿಸಿದ್ದರು. ಇದಾಗಿತ್ತು ಹಝ್ರತ್ ಉಬಯ್ಯ್‌ರಿಗೆ(ರ) ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಪ್ರೇಮದ ಸ್ಥಿತಿ. ಇದು ಮುಸ್ನದ್ ಬಿನ್ ಹಂಬಲಿನ ವರದಿಯಾಗಿದೆ.ಇದರ ಸ್ವಲ್ಪ ಭಾಗ ಸಹೀಹ್ ಬುಖಾರಿಯಲ್ಲೂ ಇದೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಹದೀಸ್-14075) (ಸಹೀಹ್ ಬುಖಾರಿ, ಕಿತಾಬುಲ್ ಬುಯೂ, ಹದೀಸ್-1414) (ಸೈರುಸ್ಸಹಾಬ, ಸಂಪುಟ-3, ಪುಟ-158, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಹಝ್ರತ್ ಪೈಗಂಬರರ(ಸ) ಸಹಾಬಿಯರಲ್ಲಿ ಆರು ಖಾಝಿಗಳಿದ್ದರು. ಅವರ ಹೆಸರುಗಳು ಹೀಗಿವೆ: ಹಝ್ರತ್ ಉಮರ್(ರ), ಹಝ್ರತ್ ಅಲಿ(ರ), ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್, ಹಝ್ರತ್ ಝೈದ್ ಬಿನ್ ಸಾಬಿತ್(ರ), ಹಝ್ರತ್ ಮೂಸಾ ಅಶ್‌ಅರಿ ಮತ್ತು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ). (ಅಸದುಲ್‌ಗಾಬ, ಸಂಪುಟ-1, ಪುಟ-170, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2016)

ಸಮ್‌ರ ಬಿನ್ ಜುಂದುಬ್ ಶ್ರೇಷ್ಠ ಪದವಿಯನ್ನು ಹೊಂದಿದ್ದ ಸಹಾಬಿಯಾಗಿದ್ದರು. ಅವರು ನಮಾಝಿನಲ್ಲಿ ತಕ್ಬೀರ್ ಹೇಳಿದ ನಂತರ ಅಲ್ಪ ಸಮಯದ ವಿರಾಮ ಹಾಕುತ್ತಿದ್ದರು. ಅಲ್ಲಾಹು ಅಕ್ಬರ್ ಎಂದು ಹೇಳಿದ ನಂತರ ಸ್ವಲ್ಪ ಸಮಯ ಮೌನವಾಗಿದ್ದುಕೊಂಡ ನಂತರ ಸೂರಃ ಫಾತಿಹ ಓದುತ್ತಿದ್ದರು. ಜನರು ಅದರ ಬಗ್ಗೆ ಆಕ್ಷೇಪವೆತ್ತಿದ್ದರು. ಇದರ ಸರಿಯಾದ ರೀತಿಯೇನೆಂದು ತಿಳಿಯಲು ಅವರು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಗೆ ಪತ್ರ ಬರೆದರು.ಹಝ್ರತ್ ಉಬಯ್ಯ್(ರ) ಬಹಳ ಸಂಕ್ಷಿಪ್ತವಾಗಿ ಅದಕ್ಕೆ ಉತ್ತರವನ್ನು ಹೀಗೆ ಬರೆದರು: ಅವರು ಮಾಡುತ್ತಿರುವ ರೀತಿ ಶರೀಅತ್ ಪ್ರಕಾರವೇ ಆಗಿದೆ. ಎಂದರೆ, ಅವರು ವಿರಾಮ ಹಾಕುವುದರಲ್ಲಿ ಯಾವುದೇ ತಪ್ಪಿಲ್ಲ. ಜನರ ಆಕ್ಷೇಪ ಸರಿಯಲ್ಲ. (ಸೈರುಸ್ಸಹಾಬ, ಸಂಪುಟ-3, ಪುಟ-145-154, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಹಝ್ರತ್ ಸುವೈದ್ ಬಿನ್ ಗುಫ್‌ಲ, ಝೈಧ್ ಬಿನ್ ಶುಜ್‌ಆನ್ ಮತ್ತು ಸುಲೈಮಾನ್ ಬಿನ್ ರಬೀಅ ಒಂದು ಯುದ್ಧಕ್ಕೆ ಹೋಗಿದ್ದರು. ಅಝೀಬ್ ಎಂಬ ಸ್ಥಳದಲ್ಲಿ ಏನೋ ಆಹಾರ ವಸ್ತು ಬಿದ್ದು ಸಿಕ್ಕಿತು. ಅಝೀಬ್ ಎಂಬುದು ಬನೂ ತಮೀಮಿನ ಒಂದು ಕಣಿವೆಯಾಗಿದೆ. ಅದು ಖಾದಿಸಿಯಾ ಮತ್ತು ಮುಗೀಸಿಯಾದ ನಡುವೆ ಇರುವ ನೀರಿನ ಒಂದು ಪ್ರದೇಶವಾಗಿದೆ. ಅದು ಖಾದಿಸಿಯಾದಿಂದ 4 ಮೈಲು ದೂರದಲ್ಲಿದೆ. ಹೇಗಿದ್ದರೂ ಸುವೈದ್ ಅದನ್ನು ಎತ್ತಿದ್ದರು. ಅವರೊಂದಿಗೆ ಇದ್ದ ಇಬ್ಬರು ಹೇಳಿದರು: ಅದನ್ನು ಬಿಸಾಕು, ಅದನ್ನು ಎಸೆ, ಬಹುಶಃ ಅದು ಇಲ್ಲಿಂದ ದಾಟಿಹೋದ ಯಾವನಾದರೂ ಮುಸ್ಲಿಮನದ್ದಾಗಿರಬಹುದು. ಸುವೈದ್ ಹೇಳಿದರು: ಖಂಡಿತವಾಗಿಯೂ ನಾನು ಅದನ್ನು ಎಸೆಯುವುದಿಲ್ಲ. ಇದು ಇಲ್ಲೇ ಬಿದ್ದು ಇದ್ದರೆ, ಅದನ್ನು ತೋಳಗಳು ತಿಂದುಬಿಡುವುವು. ಅದಕ್ಕಿಂತ ಉತ್ತಮ ಅದನ್ನು ನಾನು ಉಪಯೋಗಿಸುತ್ತೇನೆ. ಅದರ ಸ್ವಲ್ಪ ದಿನಗಳ ನಂತರ ಹಜ್ಜ್ ಮಾಡುವ ಉದ್ದೇಶದಿಂದ ಸುವೈದ್ ರವಾನೆಯಾದರು. ಮಾರ್ಗ ಮಧ್ಯೆ ಮದೀನ ಬರುತ್ತದೆ. ಅವರು ಹಝ್ರತ್ ಉಬಯ್ಯ್‌ರ(ರ) ಬಳಿಗೆ ಹೋದರು. ಬಿದ್ದು ಸಿಕ್ಕಿದ ವಸ್ತುವಿನ ಘಟನೆ ಅವರಿಗೆ ವಿವರಿಸಿದರು. ಹಝ್ರತ್ ಉಬಯ್ಯ್ ಹೇಳಿದರು: ಇಂತಹ ಒಂದು ಘಟನೆ

ನನ್ನೊಂದಿಗೂ ಆಗಿದೆ. ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ನನಗೆ ನೂರು ದೀನಾರ್‌ಗಳು ಸಿಕ್ಕಿತ್ತು. ಹಝ್ರತ್ ಪೈಗಂಬರ್(ಸ) ಆದೇಶಿದರು: ಒಂದು ವರ್ಷ ಪೂರ್ತಿ ಅದರ ಬಗ್ಗೆ ಘೋಷಿಸು, ಹಣವೆಷ್ಟಿದೆ ಮತ್ತು ಅದರ ಕೆಲವು ಗುರುತುಗಳನ್ನು ನೆನಪಿನಲ್ಲಿಡು. ಮತ್ತೆ ಇನ್ನೊಂದು ವರ್ಷ ಕಾಯಬೇಕು.ಅದರ ಗುರುತನ್ನು ಹೇಳಿ ಯಾರಾದರೂ ಬಂದರೆ, ಅದನ್ನು ಅವರಿಗೆ ಕೊಡಬೇಕು, ಇಲ್ಲದಿದ್ದರೆ ಅದು ನಿನಗಾಗಿದೆ. (ಸೈರುಸ್ಸಹಾಬ, ಸಂಪುಟ–3, ಪುಟ–145–156, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್) (ಫರ್‌ಹಂಗ್ ಸೀರತ್, ಪುಟ–197)

ಎಂದರೆ ಎರಡು ವರ್ಷ ಪೂರ್ತಿ. ಏನಾದರೂ ಸಿಕ್ಕಿದ್ದರೆ, ಒಂದು ವರ್ಷ ಅದರ ಬಗ್ಗೆ ಘೋಷಿಸಬೇಕು. ಮತ್ತೊಂದು ವರ್ಷ ಅದರ ಗುರುತುಗಳನ್ನು ನೆನಪಿನಲ್ಲಿಟ್ಟು ಜೋಪಾನವಾಗಿರಿಸಬೇಕು. ಯಾರಾದರೂ ಕೇಳಿದರೆ, ಮರಳಿಕೊಡಬೇಕು.

ಒಬ್ಬ ವ್ಯಕ್ತಿ ತಾನು ಕಳಕೊಂಡ ಯಾವುದೋ ವಸ್ತುವಿನ ಬಗ್ಗೆ ಜೋರಾಗಿ ಕೇಳುತ್ತಿದ್ದ. ಹಝ್ರತ್ ಉಬಯ್ಯ್(ರ) ಕೋಪಗೊಂಡರು. ಆ ವ್ಯಕ್ತಿ ಹೇಳಿದರು: ನಾನು ಮಸೀದಿಯಲ್ಲಿ ಲಜ್ಜಾಸ್ಪದವಾದ ಯಾವುದೇ ಮಾತನ್ನು ಹೇಳಿಲ್ಲ. ಹಝ್ರತ್ ಉಬಯ್ಯ್(ರ) ಹೇಳಿದರು: ಸರಿ, ಆದರೆ ಮಸೀದಿಯಲ್ಲಿ ಯಾವುದಾದರೂ ಲೌಕಿಕವಾದ ವಸ್ತುವಿಗಾಗಿ ಘೋಷಣೆ ಮಾಡುವುದು, ಮಸೀದಿಯ ಶಿಷ್ಟಾಚಾರ ಮತ್ತು ಮರ್ಯಾದೆಗೆ ಸೇರದ ಸಂಗತಿಯಾಗಿದೆ. (ಸೈರುಸ್ಸಹಾಬ, ಸಂಪುಟ–3, ಪುಟ–157, ದಾರುಲ್ ಇಶಾಅತ್ ಉರ್ದು ಬಜಾರ್ ರಬ್ವಾಹ್)

ಹಝ್ರತ್ ಉಬಯ್ಯ್‌ರ(ರ) ನಿಧನದ ಬಗ್ಗೆ ಹಲವು ವರದಿಗಳಿವೆ. ಒಂದು ವರದಿ ಪ್ರಕಾರ ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಹಿಜರೀ 22ರಲ್ಲಿ ಹಝ್ರತ್ ಉಬಯ್ಯ್(ರ) ನಿಧನರಾದರು ಎಂದಿದೆ. ಇನ್ನೊಂದು ವರದಿ ಪ್ರಕಾರ ಹಿಜರಿ 30ರಲ್ಲಿ ನಿಧನರಾಗಿದ್ದರು ಎಂದಿದೆ. ಇದೇ ಸರಿಯೆಂದು ತೋರುತ್ತದೆ. ಏಕೆಂದರೆ, ಹಝ್ರತ್ ಉಸ್ಮಾನ್(ರ) ಹಝ್ರತ್ ಉಬಯ್ಯ್‌ರಿಗೆ(ರ) ಪವಿತ್ರ ಖುರ್‌ಆನಿನ ಸಂಗ್ರಹದ ಕೆಲಸವನ್ನು ನೀಡಿದ್ದರು. (ಅತ್ತಬಖಾತುಲ್‌ಕುಬ್ರ, ಸಂಪುಟ–3, ಪುಟ–381, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017) (ಅಲ್‌ಅಸಾಬ, ಸಂಪುಟ–1, ಪುಟ–35–36, ದಾರುಲ್ ಫಿಕರ್ ಬೈರೂತ್ 2001)

ತುಫೈಲ್ ಮತ್ತು ಮುಹಮ್ಮದ್ ಹಝ್ರತ್ ಉಬಯ್ಯ್‌ರ(ರ) ಗಂಡುಮಕ್ಕಳಾಗಿದ್ದರು ಮತ್ತು ಉಮ್ಮೇ ಅಮ್ರ್ ಅವರ ಹೆಣ್ಮಗಳಾಗಿದ್ದಳು. ಈ ಮಕ್ಕಳ ತಾಯಿಯ ಹೆಸರು ಉಮ್ಮೇ ತುಫೈಲ್ ಬಿನ್ತ್ ತುಫೈಲ್ ಎಂದಾಗಿತ್ತು. ಅವರು ದೂಸ್ ಗೋತ್ರದವರಾಗಿದ್ದರು. (ಅತ್ತಬಖಾತುಲ್‌ಕುಬ್ರ, ಸಂಪುಟ–3, ಪುಟ–378, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಇದರೊಂದಿಗೆ ಅವರ ಪ್ರಸ್ತಾಪ ಮುಗಿಯಿತು.

***************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಪ್ರಪಂಚದಲ್ಲಿ ನನ್ನ ಪೈಕಿ ಡಂಗುರ ಹೊಡಿಸಬಹುದು. ನಾವು ಇವರನ್ನು ಪರೀಕ್ಷಿಸಿದ ನಂತರ ಮೋಸಗಾರಿಕೆಯನ್ನು ಕಂಡುಹಿಡಿದಿದ್ದೇನೆ ಎಂದು. ನಮಗೆ ಮೋಸಗಾರ ಎಂದು ಕರೆದ, ದೇವವಾಣಿಗಳನ್ನು ಅಪ್ಪಟ ಮಿಥ್ಯವಾದದು ಎಂದ, ಪುರಾತನ ಪಾಶವಿ ಆರ್ಯರಂತೆ ನಮಗೆ ಅಶ್ಲೀಲವಾಗಿ ಬೈದ, ಕೊಲೆ ಬೆದರಿಕೆಯನ್ನು ಹಾಕಿದವರಿಗೆ ಉಚ್ಚ ಧ್ವನಿಯಿಂದ ಉಪದೇಶ ನೀಡುತ್ತೇವೆ. ನಮ್ಮ ಬಗ್ಗೆ ಅವನು ಎಷ್ಟು ದುಷ್ಟತನ ತೋರಿಸಬೇಕಿತ್ತೋ ಅದು ತೋರಿಸಿ ಆಯಿತು. ಆದರೆ ಅವನು ಧರ್ಮವಂತನಾಗಿದ್ದರೆ ನೇರವಾಗಿ ನಮ್ಮ ಮುಂದೆ ಬರಲಿ, ನಾವು ಸಹ ನೋಡುವಂತಾಗಲಿ. ಆ ದೇವದೂತ ಹೇಗಿದ್ದಾನೆಂದು, ಒಂದು ವೇಳೆ ಮೇ 1887 ವರೆಗೆ ನಮ್ಮ ಎದುರಾಗಿ ಬರಲಿಲ್ಲ ಮತ್ತು ತನ್ನ ಜನ್ಮಸಹಜ ಗುಣ ಬಿಡಲಿಲ್ಲವಾದರೆ ನೋಡುತ್ತಿರಲಿ. ಆನಂತರ ನಾನು ಭೂಮಿ ಆಕಾಶಗಳ ನಿಜವಾದ ಸೃಷ್ಟಿಕರ್ತನನ್ನು ಸಾಕ್ಷಿಯಾಗಿಟ್ಟು ಮತ್ತು ಎಲ್ಲ ನೋಡುಗರನ್ನು ಸಾಕ್ಷಿಯಾಗಿಟ್ಟು ರಣಕ್ಷೇತ್ರಕ್ಕೆ ಕರೆಯುತ್ತೇನೆ. ಅದು ಕೆಳಗೆ ನಮೂದಿತ ಬಹುಮಾನದೊಂದಿಗೆ. ಅದು ನಿಜ ಅರ್ಥದಲ್ಲಿ ಯುದ್ಧ ಉನ್ಮಾದಿ ಮಾರ್ಗಭ್ರಷ್ಟ ಮತ್ತು ಕ್ರೂರಿಯಾದವನಿಗೆ ಅರ್ಹವಾಗಿದೆ. ನೋಡುತ್ತೇನೆ ಈಗಾದರೂ ಅವನು ಬಲದಿಂದ ಹೊರಗೆ ಬರುತ್ತಾನೆಯೋ ಅಥವಾ ಕೆಳಗೆ ಬರೆದ ಬಹುಮಾನಗಳನ್ನು ಸಹ ನುಂಗಿ ಬಿಡುವನೋ, ಆ ಬಹುಮಾನ ಅವನು ಬಾರದಿದ್ದ ಪಕ್ಷದಲ್ಲಿ ಮತ್ತು ಪಲಾಯನ ಮಾಡಿದ ಪಕ್ಷದಲ್ಲಿ ಇದಾಗಿದೆ. 1) ಶಾಪ 2) ಶಾಪ 3) ಶಾಪ 4) ಶಾಪ 5) ಶಾಪ 6) ಶಾಪ 7) ಶಾಪ 8) ಶಾಪ 9) ಶಾಪ 10) ಶಾಪ **ತಿಲ್ಕ ಅಶ್‌ರತನ್ ಕಾಮಿಲ:** (ಶಹನ ಹಖ್, ರೂಹಾನಿಖಝಾಇನ್, ಸಂಪುಟ–2, ಪುಟ–372–376)

ಈ ಮುಂಚೆಯೇ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ದೃಷ್ಟಾಂತ ಸಾಧನೆಯ ಬಗ್ಗೆ ಹಲವು ಭವ್ಯವಾದ ಅಧ್ಯಾಪನೆಗಳನ್ನು ಸಂಚಿಕೆ ಸಂಖ್ಯೆ 36 ರಲ್ಲಿ ಪ್ರಸ್ತುತಪಡಿಸಿರುತ್ತೇವೆ. ಇಲ್ಲಿ ಇನ್ನೊಂದು ಅದ್ಭುತವಾದ ಅಧ್ಯಾಪನೆ ಪ್ರಸ್ತುತಪಡಿಸಿ ಈ ಪ್ರಬಂಧವನ್ನು ಮುಕ್ತಾಯಗೊಳಿಸುತ್ತೇನೆ. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಮುಸ್ಲಿಮನಾಗಿರಲಿ, ಅಮುಸ್ಲಿಮನಾಗಿರಲಿ ಮತ್ತು ಮೌಲ್ವಿಯಾಗಿರಲಿ, ಪಾದರಿಯಾಗಿರಲಿ, ಪ್ರತಿಯೊಬ್ಬರಿಗೆ ದೃಷ್ಟಾಂತ ಸಾಧನೆಯ ಆಹ್ವಾನ ನೀಡುತ್ತಾ ಹೇಳುತ್ತಾರೆ:

"ಅಂತಿಮವಾಗಿ ಮತ್ತೆ ನಾನು ಪ್ರತಿಯೊಬ್ಬ ಸತ್ಯಾನ್ವೇಷಿಗೆ ನೆನಪು ಮಾಡಿಕೊಡಬಯಸುತ್ತೇನೆ. ಯಾವ ಸತ್ಯಧರ್ಮದ ದೃಷ್ಟಾಂತ ಮತ್ತು ಇಸ್ಲಾಮಿನ ಸತ್ಯತೆಯ ದೈವಿಕ ಸಾಕ್ಷ್ಯಗಳಿಂದ ನಮ್ಮ ಮತಪಂಡಿತರು ಅಂಧರಾಗಿದ್ದಾರೋ ಅದು ನನಗೆ ಕೊಡಲಾಗಿದೆ. ನನ್ನನ್ನು ಕಳುಹಿಸುವ ಉದ್ದೇಶವೇ ಇಸ್ಲಾಂ ಮಾತ್ರ ಜೀವಂತ ಧರ್ಮವಾಗಿದೆ ಎಂದು ಸಾಬೀತುಪಡಿಸುವುದಾಗಿದೆ ಮತ್ತು ಆ ಪವಾಡಗಳನ್ನು ನನಗೆ ನೀಡಲಾಗಿದೆ. ಅದರ ಮುಂದೆ ಎಲ್ಲ ಧರ್ಮದವರೂ ಮತ್ತು ನಮ್ಮ ಆಂತರಿಕ ಕುರುಡು ವಿರೋಧಿಗಳು ಸಹ ಅದರಿಂದ ವಿವಶರಾಗಿದ್ದಾರೆ. ನಾನು ಪ್ರತಿಯೋರ್ವ ವಿರೋದಿಗೆ ತೋರಿಸಬಲ್ಲೆನು.

ಆದರೆ ಈ ದೃಷ್ಟಾಂತ ಸಾಧನೆಯ ಪಂಥಹ್ವಾನದಲ್ಲಿ ಅವರು ಒಂದು ನೂರು ರೂಪಾಯಿ ಅಥವಾ ಬ್ರಿಟಿಷ್ ಸರಕಾರ ಯಾರೊಬ್ಬರಿಗೆ ಒಂದು ತಿಂಗಳಿನ ಸಂಬಳ ನೀಡುತ್ತದೆಯೋ ಅದರ ದ್ವಿಗುಣ ನಿಗದಿಪಡಿಸಿದರು. ಈ ನೆಲೆಯಲ್ಲಿ ನಾವು ಈ ಎರಡೂ ಪಂಥಹ್ವಾನಗಳನ್ನು ಬೇರೆ ಬೇರೆ ಎಂದು ಪರಿಗಣಿಸಿ ಈ ಪಂಥಹ್ವಾನವನ್ನು ಪ್ರತ್ಯೇಕ ಪ್ರಬಂಧದ ರೂಪದಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ.

ಮೇಲ್ಕಾಣಿಸಿದ ಮಿಥ್ಯದಿಂದ ತುಂಬಿದ ಪತ್ರಿಕೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ಈ ಆರೋಪ ಹೊರಿಸಲಾಯಿತು. ಬರಾಹೀನ್ ಅಹ್ಮದಿಯಾದಲ್ಲಿ ನಮೂದಿತ ಅವರ ದೇವವಾಣಿಗಳು, ಅವರ ಭವಿಷ್ಯವಾಣಿಗಳೆಲ್ಲ ಮಿಥ್ಯವಾಗಿವೆ ಮತ್ತು ಮೋಸವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಅದರ ಅತ್ಯಂತ ಔಚಿತ್ಯಪೂರ್ಣ ಮತ್ತು ತೃಪ್ತಿದಾಯಕ ಉತ್ತರವನ್ನು ನೀಡಿದ್ದಾರೆ. ಇದೆಲ್ಲ ಮೋಸವಾದರೆ ನಾನಂತೂ ಜೀವಂತವಾಗಿದ್ದೇನೆ ಮತ್ತು ದೃಷ್ಟಾಂತ ತೋರಿಸಲು ಯಾವಾಗಲೂ ಸಿದ್ಧನಾಗಿದ್ದೇನೆ ಮತ್ತು ಹಲವು ವರ್ಷಗಳಿಂದ ಆಹ್ವಾನಿಸುತ್ತಿದ್ದೇನೆ. ಆದರೂ ಈ ಜನರು ದೃಷ್ಟಾಂತ ನೋಡಲು ಏಕೆ ಬರುತ್ತಿಲ್ಲ? ಅವರ ಈ ಅಮೋಘವಾದ ಉತ್ತರ ಮತ್ತು ಅವರು ನೀಡಿದ ಪಂಥಹ್ವಾನ ನಾವು ಅವರದ್ದೇ ಪದಗಳಲ್ಲಿ ಈ ಕೆಳಗೆ ನಮೂದಿಸುತ್ತಿದ್ದೇವು. ಅವರು ಹೇಳುತ್ತಾರೆ.

"ನಮ್ಮ ದೇವವಾಣಿಗಳ ಹೆಸರು ಮೋಸ ಎನ್ನುವುದು ಅಥವಾ ವಂಚನೆಯನ್ನು ಸಾರುವುದಾರೆ ಇದು ಹಿಂದೂ ಬಾಂಧವರಿಗೆ ಆಗ ಸರಿ ಕಾಣುತ್ತಿತ್ತು. ಅವರು ನಾವು ಕರೆದಾಗ ನಮ್ಮ ಬಾಗಿಲಿಗೆ ಬಂದು ಹಾಜರಾಗಬೇಕಿತ್ತು. ಆದರೆ ನಾವು ಸುರ್ಮಿ ಚಶ್ಮ ಆರ್ಯದಲ್ಲಿ ನಲವತ್ತು ದಿನಗಳ ವಾಸದ ಜಾಹಿರಾತು ಜಾರಿ ಮಾಡಿ ನೋಡಿದೆವು. ಯಾವ ಹಿಂದೂ ಸಹ ಕಿವಿಗೊಡಲಿಲ್ಲ. ತುಸು ಯೋಚನೆ ಮಾಡಿ ನೋಡಿರಿ. ಯಾವ ವ್ಯಕ್ತಿ ಇಡೀ ಪ್ರಪಂಚದಲ್ಲಿ ತನ್ನ ದೇವವಾಣಿಯ ದಾವೆಯ ಜಾಹಿರಾತು ಪ್ರಕಟಿಸಿ ಕಳುಹಿಸಿಕೊಟ್ಟು ಎಲ್ಲ ತರದ ವಿರೋಧಿಗಳಿಗೆ ಪರೀಕ್ಷಿಸಲು ಕರೆ ನೀಡುವನೋ ಅವನ ಈ ಧೈರ್ಯ ಮತ್ತು ಸಾಹಸದ ಬುನಾದಿ ಮೋಸಗಾರಿಕೆಯ ಮೇಲೆ ನಿಲ್ಲಬಹುದೆ? ಯಾವನು ಇಸ್ಲಾಮ್ ಧರ್ಮದ ಸಂದೇಶ, ದೇವವಾಣಿಯ ದಾವೆ ಆಧಾರಿತ ಪತ್ರಗಳನ್ನು ಅಮೇರಿಕ ಮತ್ತು ಯೂರೋಪಿನ ದೂರ ದೂರದ ದೇಶಗಳಿಗೆ ತಲುಪಿಸಿ ಕೋಲಾಹಲ ಎಬ್ಬಿಸಿದನೋ ಅವನ ಸ್ಥಿರತೆಯ ಬುನಾದಿ ಕೇವಲ ಬೂಟಾಟಿಕೆಯ ಮೇಲೆ ನಿಲ್ಲಬಹುದೆ? ಇಡೀ ಪ್ರಪಂಚದ ಎದುರು, ತನ್ನನ್ನು ತಾನು ಮೋಸಗಾರ ಎಂದು ತಿಳಿದಿರುವವನು. ಅವನ ಜೊತೆ ಅವನ ದೇವರು ಇಲ್ಲ ಎಂದಾದರೆ, ಅವನು ಸುಳ್ಳುಗಾರ ಎಂದಾದರೆ, ಇಂತಹ ದಾವೆ ಸಾರಲು ಸಾಧ್ಯವೇ? ಅಕಟಟಾಕಟ! ಆರ್ಯರ ಬುದ್ಧಿ ಭ್ರಮೆಗೊಂಡಿದೆ. ದ್ವೇಷವನ್ನು ಇಟ್ಟುಕೊಂಡಿದ್ದಾರೆ. ಕಪಟ ಮತ್ತು ದುಷ್ಟತನದಿಂದ ಅವರ ಕಣ್ಣುಗಳು ಮೋಸಹೋಗಿವೆ. ಈಗ ಈ ವಿವೇಕಯುತ ಹಿಂದೂ ಅವನು ಈ ದೈವಿಕ ಕಾರ್ಯ ಭಾರದ ಹೆಸರು ಮೋಸಗಾರಿಕೆ ಎನ್ನುತ್ತಾನೆ. ಅದರ ಉತ್ತರ ಬರೆಯಲಾಗುತ್ತದೆ. ಈ ಚಂಚಲ ಮನುಷ್ಯನ ಹೇಡಿತನದ ಕ್ರಿಯೆಗಳನ್ನು ಎತ್ತಿ ತೋರಿಸುವುದು ಅನಿವಾರ್ಯವಾಗಿದೆ. ಅವನು ಒಂದು ದೀರ್ಘ ಅವಧಿಯಿಂದ ತನ್ನ ಮುಖವಾಡಧರಿಸಿ ತಮ್ಮ ಪತ್ರಿಕೆಗಳಲ್ಲಿ ನಮ್ಮನ್ನು ಬಯ್ಯುತ್ತಾನೆ. ಕೊಲೆ ಮಾಡುವ ಬೆದರಿಕೆ ಒಡ್ಡುತ್ತಾನೆ. ಆದುದರಿಂದ "ಓ ಪ್ರಭು ಅವನ ನಮ್ಮ ಮಧ್ಯೆ ನೀನೇ ತೀರ್ಮಾನ ಮಾಡು" ಎಂಬ ಪ್ರಾರ್ಥನೆಯೊಂದಿಗೆ ನಾವು ಈ ಘೋಷಣೆಯನ್ನು ಜಾರಿ ಮಾಡುತ್ತೇವೆ ಮತ್ತು ಅವನಿಗೆ ವಿಶೇಷವಾಗಿ ನಮ್ಮನ್ನು ಪರೀಕ್ಷಿಸಲು ಆಮಂತ್ರಿಸುತ್ತೇವೆ. ಈಗ ಮುಖವಾಡ ಕಳಚಿ ನಮ್ಮ ಮುಂದೆ ಬರಲಿ ಮತ್ತು ತನ್ನ ಹೆಸರು ಹಾಗೂ ವಿಳಾಸ ತೋರಿಸಲಿ. ಮತ್ತು ನಲವತ್ತು ದಿನಗಳವರೆಗೆ ನಮ್ಮನ್ನು ಪರೀಕ್ಷಿಸಲು ನಮ್ಮೊಂದಿಗಿರಲಿ. ಈ ಅವಧಿಯಲ್ಲಿ ಯಾವುದೇ ಭವಿಷ್ಯವಾಣಿ ಪೂರ್ಣಗೊಂಡದ್ದು ಕಾಣುವವನಾದರೆ, ಅವನು ಅದರಲ್ಲಿ ವಿವಶನಾದರೆ ಇದೇ ಸ್ಥಳದಲ್ಲಿ ತನ್ನ ಉದ್ದದ ಜಡೆಯನ್ನು ಕತ್ತರಿಸಿ, ಮತ್ತು ವ್ಯರ್ಥದ ಮಂತ್ರಮಾಲೆಯನ್ನು ಮುರಿದು ಹಾಕಿ, ಈ ಪವಿತ್ರ ಜಮಾಅತಿನಲ್ಲಿ ಪ್ರವೇಶ ಮಾಡಲಿ. ಅದು ಲಾ–ಇಲಾಹ ಇಲ್ಲಲ್ಲಾಹ್ ಏಕದೇವತ್ವದಿಂದ ಮತ್ತು ಮುಹಮ್ಮದುರ್ ರಸೂಲುಲ್ಲಾಹ್‌ರ ಪರಿಪೂರ್ಣ ಮಾರ್ಗದರ್ಶನದಿಂದ, ಧರ್ಮಭ್ರಷ್ಟರನ್ನು, ಪಥಭ್ರಷ್ಟರನ್ನು ಸರಿಯಾದ ಮಾರ್ಗದಲ್ಲಿ ತರುತ್ತದೆ. ಮತ್ತೆ ನೋಡಬಹುದು ಸರ್ವ ಸಾಮರ್ಥ್ಯಯುಳ್ಳವರು ಮತ್ತು ಶಕ್ತಿವಂತ ಮಾಲೀಕನು ಹೇಗೆ ಕ್ಷಣಾರ್ಧದಲ್ಲಿ ಆಂತರಿಕ ಮಲಿನತೆಯಿಂದ ಪರಿಶುದ್ಧಗೊಳಿಸಲ್ಪಡುತ್ತಾನೆ ಮತ್ತು ಹೇಗೆ ಮಾಲಿನ್ಯತೆಯಿಂದ ತುಂಬಿದವನನ್ನು ಅಲ್ಲಾಹನು ಒಂದು ಸ್ವಚ್ಛ

ಪರಿಶುದ್ಧನನ್ನಾಗಿ ಮಾಡುತ್ತಾನೆ. ಆದರೆ ಈ ನಲವತ್ತು ದಿನಗಳ ಅವಧಿಯಲ್ಲಿ ಯಾವುದೇ ಭವಿಷ್ಯವಾಣಿ ಪೂರ್ಣಗೊಂಡದ್ದು ಕಾಣಲಿಲ್ಲವೆಂದಾದರೆ ಈ ನಲವತ್ತು ದಿನಗಳ ದಂಡರೂಪದಲ್ಲಿ ನೂರು ರೂಪಾಯಿ ಅಥವಾ ಬ್ರಿಟಿಷ್ ಸರಕಾರ ನೀಡುತ್ತಿರುವ ಯಾವುದೇ ಸರಕಾರಿ ನೌಕರನು ಪಡೆಯುತ್ತಿರುವ ಮಾಸಿಕ ಸಂಬಳ ನಮ್ಮಿಂದ ಪಡೆಯಬಹುದು. ಮತ್ತು ಈ ಕಾರಣವನ್ನು ಸವಿವರವಾಗಿ ಇಡೀ ಪ್ರಪಂಚದಲ್ಲಿ ತನ್ನ ಬಗ್ಗೆ ಡಂಗುರ ಹೊಡಿಸಬಹುದು. ನಾವು ಇವರನ್ನು ಪರೀಕ್ಷಿಸಿದ ನಂತರ ಇವರ ಮೋಸಗಾರಿಕೆಯನ್ನು ಕಂಡುಹಿಡಿದಿದ್ದೇನೆ ಎಂದು. ನಮ್ಮನ್ನು ಮೋಸಗಾರ ಎಂದು ಕರೆದ ದೇವವಾಣಿಗಳನ್ನು ಅಪ್ಪಟ ಮಿಥ್ಯವಾದದು ಎಂದ, ಪುರಾತನ ಪಾಶವಿ ಆರ್ಯರಂತೆ ನಮಗೆ ಅಶ್ಲೀಲ ಬಯ್ಯುಗಳಗಳನ್ನು ಹಾಕಿದ. ಕೊಲೆ ಬೆದರಿಕೆಯನ್ನು ಹಾಕಿದ. ಅವನಿಗೆ ಉಚ್ಛ ಧ್ವನಿಯಿಂದ ಉಪದೇಶ ನೀಡುತ್ತೇವೆ. ನಮ್ಮ ಬಗ್ಗೆ ಅವನು ಎಷ್ಟು ದುಷ್ಟತನ ತೋರಿಸಬೇಕಿತ್ತೋ ಅದು ತೋರಿಸಿ ಆಯಿತು. ಆದರೆ ಅವನು ಧರ್ಮವಂತನಾಗಿದ್ದರೆ ನೇರವಾಗಿ ನಮ್ಮ ಮುಂದೆ ಬರಲಿ, ನಾವು ಸಹ ನೋಡುವಂತಾಗಲಿ. ಆ ದೇವದೂತ ಹೇಗಿದ್ದಾನೆಂದು, ಒಂದು ವೇಳೆ ಮೇ 1887 ವರೆಗೆ ನಮ್ಮ ಎದುರಾಗಿ ಬರಲಿಲ್ಲ ಮತ್ತು ತನ್ನ ಜನ್ಮ ಸಹಜ ಗುಣ ಬಿಡಲಿಲ್ಲವಾದರೆ ನೋಡುತ್ತಿರಲಿ. ಆನಂತರ ನಾನು ಭೂಮಿ ಆಕಾಶಗಳ ನಿಜವಾದ ಸೃಷ್ಟಿಕರ್ತನನ್ನು ಸಾಕ್ಷಿಯಾಗಿಟ್ಟು ಮತ್ತು ಎಲ್ಲ ನೋಡುಗರನ್ನು ಸಾಕ್ಷಿಯಾಗಿಟ್ಟು ರಣಕ್ಷೇತ್ರಕ್ಕೆ ಕರೆಯುತ್ತೇನೆ. ಅದು ಕೆಳಗೆ ನಮೂದಿತ ಬಹುಮಾನ, ಅದು ನಿಜ ಅರ್ಥದಲ್ಲಿ ಯುದ್ಧ ಉನ್ಮಾದಿ, ಮಾರ್ಗಭ್ರಷ್ಟ ಮತ್ತು ಕ್ರೂರಿಯಾದವನಿಗೆ ಅರ್ಹವಾಗಿದೆ. ನೋಡುತ್ತೇನೆ ಈಗಾದರೂ ಅವನು ಬಲದಿಂದ ಹೊರಗೆ ಬರುತ್ತಾನೆಯೋ ಅಥವಾ ಕೆಳಗೆ ಬರೆದ ಬಹುಮಾನಗಳನ್ನು ಸಹ ನುಂಗಿ ಬಿಡುವನೋ, ಆ ಬಹುಮಾನ ಅವನು ಬಾರದಿದ್ದ ಪಕ್ಷದಲ್ಲಿ ಮತ್ತು ಪಲಾಯನ ಮಾಡಿದ ಪಕ್ಷದಲ್ಲಿ ಇದಾಗಿದೆ. 1) ಶಾಪ 2) ಶಾಪ 3) ಶಾಪ 4) ಶಾಪ 5) ಶಾಪ 6) ಶಾಪ 7) ಶಾಪ 8) ಶಾಪ 9) ಶಾಪ 10) ಶಾಪ ತಿಲ್‌ಕ ಅಶ್‌ರತನ್ ಕಾಯಿಲ: (ಶಹನ ಹಖ್, ರೂಹಾನಿ ಖಝಾಈನ್, ಸಂಪುಟ–2, ಪುಟ–372–376)

ಈ ಮುಂಚೆಯೇ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ದೃಷ್ಟಾಂತ ಸಾಧನೆಯ ಬಗ್ಗೆ ಹಲವು ಭವ್ಯವಾದ ಅಧ್ಯಾಪನೆಗಳನ್ನು ಸಂಚಿಕೆ ಸಂಖ್ಯೆ 36 ರಲ್ಲಿ ಪ್ರಸ್ತುತಪಡಿಸಿರುತ್ತೇವೆ. ಇಲ್ಲಿ ಇನ್ನೊಂದು ಅದ್ಭುತವಾದ ಅಧ್ಯಾಪನೆ ಪ್ರಸ್ತುತಪಡಿಸಿ ಈ ಪ್ರಬಂಧವನ್ನು ಮುಕ್ತಾಯಗೊಳಿಸುತ್ತೇನೆ. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಮುಸ್ಲಿಮನಾದರೇನು, ಅಮುಸ್ಲಿಮನಾದರೇನು ಮತ್ತು ಮೌಲ್ವಿಯಾದರೇನು, ಪಾದರಿಯಾದರೇನು, ಪ್ರತಿಯೊಬ್ಬರಿಗೆ ದೃಷ್ಟಾಂತ ಸಾಧನೆಯ ಆಹ್ವಾನ ನೀಡುತ್ತಾ ಹೇಳುತ್ತಾರೆ.

“ಅಂತಿಮವಾಗಿ ಮತ್ತೆ ನಾನು ಪ್ರತಿಯೊಬ್ಬ ಸತ್ಯಾನ್ವೇಷಿಗೆ ನೆನಪು ಮಾಡಿಕೊಡಬಯಸುತ್ತೇನೆ. ಆ ಸತ್ಯಧರ್ಮದ ದೃಷ್ಟಾಂತ ಮತ್ತು ಇಸ್ಲಾಮಿನ ಸತ್ಯತೆಯ ದೈವಿಕ ಸಾಕ್ಷ್ಯಗಳು ಅದರಿಂದ ನಮ್ಮ ಮತಪಂಡಿತರು ಅಂಧರಾಗಿದ್ದಾರೆ. ಅದು ನನಗೆ ಕೊಡಲಾಗಿದೆ. ನನ್ನನ್ನು ಕಳುಹಿಸುವ ಉದ್ದೇಶ ಇಸ್ಲಾಮ್ ಮಾತ್ರ ಜೀವಂತ ಧರ್ಮವಾಗಿದೆ ಎಂದು ಸಾಬೀತುಪಡಿಸುವುದಾಗಿದೆ ಮತ್ತು ಆ ಪವಾಡಗಳನ್ನು ನನಗೆ ನೀಡಲಾಗಿದೆ. ಅದರ ಮುಂದೆ ಎಲ್ಲ ಧರ್ಮದವರೂ ಮತ್ತು ನಮ್ಮ ಆಂತರಿಕ ಕುರುಡು ವಿರೋಧಿಗಳು ಸಹ ಅದರಿಂದ ವಿವಶರಾಗಿದ್ದಾರೆ. ನಾನು ಪ್ರತಿಯೋರ್ವ ವಿರೋದಿಗೆ ತೋರಿಸಬಲ್ಲೆನು.

**ಪವಿತ್ರ ಖುರ್‌ಆನ್**

ತನ್ನ ಶಿಕ್ಷಣ ಮತ್ತು ವಿವೇಕಯುಕ್ತ ಜ್ಞಾನ ಮತ್ತು ಆಧ್ಯಾತ್ಮಿಕ ಜ್ಞಾನ ಮತ್ತು ಪರಿಪೂರ್ಣ ಸಾಹಿತ್ಯರೂಪದಲ್ಲಿ ಒಂದು ಪವಾಡವಾಗಿದೆ. ಮೂಸಾರ ಪವಾಡಗಳಿಗಿಂತ ಮಿಗಿಲಾದುದಾಗಿದೆ ಮತ್ತು ಈಸಾರ ಪವಾಡಗಳಿಗಿಂತ ನೂರಾರು ಪಟ್ಟು ಹೆಚ್ಚಾಗಿದೆ.

ನಾನು ಮತ್ತೆ ಮತ್ತೆ ಹೇಳುವೆನು. ಮತ್ತು ಉಚ್ಛ ಸ್ವರದಲ್ಲಿ ಹೇಳುವೆನು. ಖುರ್‌ಆನ್ ಮತ್ತು ರಸೂಲೆ ಕರೀಂ(ಸ) ರೊಡನೆ ಸತ್ಯ ಪ್ರೇಮ ಹೊಂದುವುದು, ಸತ್ಯ ಅನುಸರಣೆ ಮಾಡುವುದು, ಮನುಷ್ಯನಿಗೆ ಪವಾಡ ಪುರುಷನಾಗಿ ಮಾಡುತ್ತದೆ. ಅಂತಹ ಪರಿಪೂರ್ಣ ಮನುಷ್ಯನ ಮೇಲೆಯೇ ರಹಸ್ಯ ಜ್ಞಾನಗಳ ಬಾಗಿಲುಗಳನ್ನು ತೆರೆಯಲಾಗುತ್ತದೆ. ಲೋಕದ ಯಾವ ಧರ್ಮದವನು ಸಹ ಈ ಆಧ್ಯಾತ್ಮಿಕ ಅನುಗ್ರಹಗಳನ್ನು ತೋರಿಸಲಾರನು. ಆದುದರಿಂದ ಈ ವಿಷಯದಲ್ಲಿ ನಾನು ಅನುಭವ ಹೊಂದಿದವನಾಗಿದ್ದೇನೆ. ನಾನು ನೋಡುತ್ತಿದ್ದೇನೆ. ಇಸ್ಲಾಮ್ ಧರ್ಮ ಹೊರತಾಗಿ ಎಲ್ಲ ಧರ್ಮಗಳು ಮೃತ ಧರ್ಮಗಳು, ಅವರ ದೇವರುಗಳು ಮೃತ ದೇವರುಗಳು, ಸ್ವಯಂ ಅವರ ಅನುಯಾಯಿಗಳು ಸಹ ಮೃತರು. ಅಲ್ಲಾಹನೊಡನೆ ಜೀವಂತ ಸಂಬಂಧ ಹೊಂದಲು ಇಸ್ಲಾಮ್ ಸ್ವೀಕರಿಸದೆ ಸಾಧ್ಯವಿಲ್ಲ ಎಂದು ಸಾಧ್ಯವಿಲ್ಲ.

ಓ ಮೂಢರೆ! ನಿಮಗೆ ಮೃತರ ಆರಾಧನೆ ಹೇಗೆ ರುಚಿಸುತ್ತದೆ? ಮೃತ ಶರೀರ ತಿನ್ನುವುದರಲ್ಲಿ ಯಾವ ರುಚಿಯಿದೆ? !!! ಬನ್ನಿರಿ. ನಾನು ನಿಮಗೆ ತೋರಿಸುತ್ತೇನೆ. ಜೀವಂತ ದೇವನು ಎಲ್ಲಿದ್ದಾನೆಂದು ಮತ್ತು ಯಾವ ಸಮುದಾಯದೊಂದಿಗೆ ಇದ್ದಾನೆಂದು, ಅವನು ಇಸ್ಲಾಮ್‌ನೊಂದಿಗಿದ್ದಾನೆ. ಇಸ್ಲಾಮ್ ಈ ಸಮಯಕ್ಕೆ ಮೂಸರ ತೂರ್ (ಪರ್ವತ) ಆಗಿದೆ. ಆ ಮೂಲಕ ಅಲ್ಲಾಹನು ನುಡಿಯುತ್ತಿದ್ದಾನೆ. ತನ್ನ ಪ್ರವಾದಿಗಳೊಡನೆ ಮಾತನಾಡುವ ಆ ದೇವನು ಮೌನವಹಿಸಿದವನೆ, ಇಂದು ಅವನು

**ಓರ್ವ ಮುಸಲ್ಮಾನನ**

ಹೃದಯದಲ್ಲಿ ಮಾತನಾಡುತ್ತಿದ್ದಾನೆ. ಇದನ್ನು ಪರೀಕ್ಷಿಸಲು ನಿಮ್ಮಲ್ಲಿ ಯಾರಿಗೂ ಆಸಕ್ತಿಯಿಲ್ಲವೇ. ಸತ್ಯ ನೆನಪಿನಲ್ಲಿದ್ದರೆ ಸ್ವೀಕರಿಸಿರಿ. ನಿಮ್ಮ ಕೈಯಲ್ಲಿ ಏನಿದೆ? ಕಫನಿನಲ್ಲಿ ಅಡಗಿರುವ ಒಂದು ಶವಮಾತ್ರ, ಮತ್ತೇನಿದೆ? ಒಂದು ಮಣ್ಣಿನ ಮುದ್ದೆ. ಈ ಶವ ದೇವನಾಗಬಲ್ಲನೆ? ಇದು ನಿಮಗೆ ಉತ್ತರ ಕೊಡಬಲ್ಲನೆ? ಇತ್ತ ಬನ್ನಿ! ಹೌದು! ಬಾರದಿದ್ದರೆ ಶಾಪವಿದೆ ನಿಮ್ಮ ಮೇಲೆ. ಈ ಕೊಳೆತು ನಾರಿ ಹೋದ ಶವದೊಂದಿಗೆ ನನ್ನ ಜೀವಂತ ದೇವನನ್ನು ಹೋಲಿಕೆ ಮಾಡುವುದು ಬೇಡ.

ನೋಡಿರಿ. ನಾನು ನಿಮಗೆ ಹೇಳುತ್ತೇನೆ. ನಲವತ್ತು ದಿನಗಳು ಕಳೆಯಲಿಕ್ಕಿಲ್ಲ. ಅವನು ಕೆಲವು ದೈವಿಕ ದೃಷ್ಟಾಂತಗಳ ಮೂಲಕ ನಿಮ್ಮನ್ನು ನಾಚುವಂತೆ ಮಾಡುವನು. ಶುದ್ಧ ಮನಸ್ಸಿನಿಂದ ಬಾರದವರು ಅಪವಿತ್ರರಾಗಿದ್ದಾರೆ. ಮತ್ತು ನಿರಾಕರಿಸುವವರು ಅಶ್ಲೀಲರಾಗಿದ್ದಾರೆ. ಅವರು ಅಸ್ವಸ್ಥ ಸ್ವಭಾವ ಉಳ್ಳವರಾಗಿದ್ದಾರೆಯೇ ಹೊರತು ಸತ್ಯಾನ್ವೇಷಿಗಳಲ್ಲ. ಓ ನನ್ನ ವಿರೋಧಿ ಮೌಲ್ವಿಗಳೇ! ನಿಮಗೆ ಸಂಶಯವಿದ್ದರೆ ಬನ್ನಿ. ಕೆಲವು ದಿನ ನನ್ನ ಸಹವಾಸದಲ್ಲಿರಿ. ಅಲ್ಲಾಹನ ದೃಷ್ಟಾಂತ ಕಾಣದಿದ್ದರೆ ನಮ್ಮನ್ನು ಹಿಡಿಯಿರಿ. ಹೇಗೆ ಬೇಕಾದರೂ ಸುಳ್ಳಾಗಿಸಿರಿ. ನಾನು ನ್ಯಾಯಪೂರ್ತಿಕರಣ ಮಾಡಿರುತ್ತೇನೆ. ನೀವು ಈಗ ಈ ನ್ಯಾಯವನ್ನು ತಿರಸ್ಕರಿಸಬೇಡಿ. ನಿಮ್ಮಲ್ಲಿ ಯಾವ ಉತ್ತರವು ಉಳಿಯಲಿಲ್ಲ. ಅಲ್ಲಾಹನ ದೃಷ್ಟಾಂತಗಳು ಮಳೆಯ ಹಾಗೆ ಸುರಿಯುತ್ತಿದೆ. ನಿಮ್ಮಲ್ಲಿ ಯಾವೊಬ್ಬನೂ ಸತ್ಯ ಹೃದಯವಂತನು ಇಲ್ಲವೇ? ನನ್ನ ಬಳಿ ಬರಲಿ, ಒಬ್ಬನಾದರೂ ಇಲ್ಲವೇ? (ಝುಮೀಮ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–345)

ಮುಂದೆ ಇನ್‌ಶಾಅಲ್ಲಾಹ್ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಹ್ವಾನ ಓದುಗರ ಮುಂದೆ ಪ್ರಸ್ತುತಪಡಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಸಾರ್ಥಕವಾಗುವುದು. ಏಕೆಂದರೆ ಯಾವ ವ್ಯಕ್ತಿಗೆ ಇದನ್ನು ಮನವರಿಕೆ ಮಾಡಿಕೊಡಲಾಗುತ್ತದೆ. “ಯಾವುದೇ ಉದ್ದೇಶ ಸಾಧಿಸಲು ಒಳ್ಳೆಯ ಮಾರ್ಗಗಳೂ ಇವೆ. ಕೆಟ್ಟ ಮಾರ್ಗಗಳೂ ಇವೆ. ಯಾವಾಗಲೂ ಒಳ್ಳೆಯ ಮಾರ್ಗವನ್ನು ಪಡೆಯಲು ಪ್ರಯತ್ನಿಸಬೇಕು. ಒಳ್ಳೆಯ ಮಾರ್ಗಗಳಲ್ಲಿ ಅತ್ಯಂತ ಸಮೀಪದ ಮಾರ್ಗವನ್ನು ಆರಿಸಿಕೊಳ್ಳಬೇಕು. ಅಂತಹ ಮಾರ್ಗ ಯಾರು ಬಯಸಲಿಕ್ಕಿಲ್ಲ. ಸ್ಪಷ್ಟವಿದೆ. ಯಾವ ವ್ಯಕ್ತಿ ಅಲ್ಲಾಹನಿಂದ ದುಆ ಮಾಡುವನೋ ಅವನಿಗೆ ಸರಿಯಾದ ಮಾರ್ಗ ದಯಪಾಲಿಸು ಎಂದು. ಅವನ ಮನವು ಈ ಭಾವನೆಯಿಂದ ಪ್ರಭಾವಿತಗೊಳ್ಳುವುದು ಮತ್ತು ಅವರ ಪ್ರಯತ್ನಗಳು ಸಹ ಅದೇ ಮಾರ್ಗದಲ್ಲಿ ನಡೆಯುವುದು. ಅವನು ತನ್ನ ಕಾರ್ಯಗಳಲ್ಲಿ ಈ ತತ್ವಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳುವನು.

1) ನನ್ನ ಎಲ್ಲ ಕಾರ್ಯಗಳು ಧರ್ಮಸಮ್ಮತವಾಗಿರಲಿ.

2) ನಾನು ಯಾವುದೇ ಒಂದು ಸ್ಥಾನಮಾತ್ರ ತಲುಪಿ ತೃಪ್ತಿಪಟ್ಟುಕೊಳ್ಳದೆ ಅಪ್ರತಿಮ ಪ್ರಗತಿಯ ದಾಹ ನನ್ನ ಮನದಲ್ಲಿರಬೇಕು.

3) ನನ್ನ ಸಮಯ ವ್ಯರ್ಥವಾಗಬಾರದು. ಸ್ವಲ್ಪ ಸಮಯದಲ್ಲಿಯೇ ಗುರಿ ಸಾಧಿಸುವಂತಿರಬೇಕು. ಅವನ ಕರ್ಮ ಸುದಾರಣೆಯಲ್ಲಿ ಮತ್ತು ಸತತ ಪ್ರಯತ್ನಪಡುವುದರಲ್ಲಿ ಯಾವ ಅನುಮಾನ ಇರಲು ಸಾಧ್ಯ.

ನಾನು ಭಾವಿಸುತ್ತೇನೆ. ಎಲ್ಲ ಮುಸ್ಲಿಮರು ಈ ಪ್ರಾರ್ಥನೆಯನ್ನು ನಿಷ್ಠಾಪೂರ್ವಕವಾಗಿ ಮಾಡುವವರಾದರೆ ಮತ್ತು ಅದರ ಅರ್ಥವನ್ನು ಮನದಟ್ಟು ಮಾಡಿಕೊಳ್ಳುವವರಾದರೆ ಆ ಪ್ರಾರ್ಥನೆಯ ಅನುಗ್ರಹದಿಂದ ಅಂತೂ ಅನುಗ್ರಹಿತರಾಗುವ ಜೊತೆಯಲ್ಲಿ ಅದರ ಸ್ವಾಭಾವಿಕ ಪ್ರಭಾವ ಅವರ ಮನಸ್ಸಿನ ಮೇಲೂ ಆಗುವುದು ಖಂಡಿತ. ಅದು ಸಹ ಕಡಿಮೆ ಪ್ರಮಾಣದ ಸಾಧನೆಯೇನಲ್ಲ.

**(ತಫ್‌ಸೀರೆ ಕಬೀರ್, ಸಂಪುಟ–1, ಪುಟ–33, ಮುದ್ರಣ ಖಾದಿಯಾನ್ 2010)**

**ಜಲ್ಸ ಸಾಲಾನ ಖಾದಿಯಾನ್ 2020 ರದ್ದುಗೊಳಿಸಲಾಗಿದೆ**

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಎಲ್ಲಾ ಸದಸ್ಯರು ಹಾಗೂ ಹುದ್ದೆದಾರರಿಗೆ ತಿಳಿಸುವುದೇನೆಂದರೆ ಈ ವರ್ಷ ಡಿಸೆಂಬರ್ 25 ರಿಂದ 27ರವರೆಗೆ ನಡೆಯ ಬೇಕಾದ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ಖಾದಿಯಾನ್ ದೇಶದಾದ್ಯಂತ ಹರಡಿರುವ ಸಾಂಕ್ರಾಮಿಕ ರೋಗ ಕೊರೋನದಿಂದ ಹಾಗೂ ಪ್ರವಾಸಿಗಳಿಗೆ ಆಗುವ ಅಸೌಕರ್ಯದ ಕಾರಣದಿಂದ ಹುಝೂರ್(ಅಬಅ)ರವರ ನಿರ್ದೇಶನದ ಪ್ರಕಾರ ರದ್ದುಗೊಳಿಸಲಾಗಿದೆ.

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಮರ್‌ಕಝಿಯಾ, ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 19 November 2020, Issue No. 45

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 44ರ ವರದಿಯ ಉಳಿದ ಭಾಗ)**

**ಆಮೀನ್ ಸಮಾರಂಭ**

9 ಗಂಟೆ 25 ನಿಮಿಷಕ್ಕೆ ಹುಝೂರ್ ಮಸೀದಿಯ ಸಭಾಂಗಣಕ್ಕೆ ಆಗಮಿಸಿದರು ಮತ್ತು ನಿಗದಿತ ಕಾರ್ಯಕ್ರಮದಂತೆ ಆಮಿನ್ ಸಮಾರಂಭ ಏರ್ಪಟ್ಟಿತು. ಹುಝೂರ್ 25 ಬಾಲಕ ಬಾಲಕಿಯರಿಂದ ಪವಿತ್ರ ಖುರ್‌ಆನ್‌ನ ಒಂದೊಂದು ವಚನವನ್ನು ಆಲಿಸಿದರು ಮತ್ತು ಕೊನೆಯಲ್ಲಿ ದುಆ ಮಾಡಿಸಿದರು.

ಈ ಕೆಳಗೆ ನಮೂದಿತ ಅದೃಷ್ಟಶಾಲಿ ಬಾಲಕ ಬಾಲಕಿಯರು ಆಮೀನ್ ಸಮಾರಂಭದಲ್ಲಿ ಭಾಗವಹಿಸುವ ಭಾಗ್ಯ ಪಡೆದಿದ್ದರು.

ಶುಮಾಈಲ್ ಅಹ್ಮದ್ ಮುನೀರ್, ಫರಾಝ್ ಅಹ್ಮದ್ ಮೀರ್, ಅದೀಲ್ ಅಹ್ಮದ್, ನೂರೇಝ್ ಅಲೀ ಮನ್‌ಝೂರ್, ಜಲೀಸ್ ಅಹ್ಮದ್ ಝಫರ್, ಜಾಝೀಬ್ ಅಹ್ಮದ್ ಝಫರ್, ಝೈನ್ ಮುಝಫ್ಫರ್, ಕಾಮ್ರಾನ್ ಅಝ್‌ಹರ್ ಕಹ್ಲೋನ್, ಅಹ್ಮದ್ ರಹ್ಮಾನ್, ಆಝೀನ್ ಶೆಹ್‌ಝಾದ್ ಶೇಖ್, ಝೀಶಾನ್ ಉಮರ್, ಸಯ್ಯದ್ ಸಫೀರ್ ಅಹ್ಮದ್, ಉಸ್ಮಾನ್ ಮಹ್ಮೂದ್, ಅಲೀ ಸುಫಿಯಾನ್ ಚೌಧರಿ, ಆಶಿರ್ ಅಹ್ಮದ್ ನಾಸಿರ್, ಅಫ್ರಾ ಸಯ್ಯಾಬ್ ನಸೀಮ್.

ಆತಿಕೊ ಅಹ್ಮದ್, ಮದೀಹ ಅತ್‌ಹರ್, ರಾನಿಯಾ ಅಹ್ಮದ್, ಲಾಯಿಬಾ ಮಲಿಕ್, ಮಶಅಲ್ ಅವಾನ್, ಸಜಲ್ ಖಾನ್, ಆಫಿಯಾ ಚೌಧರಿ, ಅತಿಯಾ ಮಲ್‌ಹಿ, ಸಫ್‌ರಹ್ ನಾಸಿರ್.

ಆಮೀನ್ ಸಮಾರಂಭದಲ್ಲಿ ಭಾಗವಹಿಸಿದ ಈ ಮಕ್ಕಳು ಜರ್ಮನಿಯ ವಿವಿಧ ಜಮಾಅತುಗಳಾದ, DIETZENBACH, RIEDSTADT, TRUNUS ಯಿಂದ ಬಂದಿದ್ದರು.

ಅನಂತರ ಹುಝೂರ್ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

****************

**29 ಮೇ ಶುಕ್ರವಾರ 2015**

ಹುಝೂರ್ ಮುಂಜಾನೆ ನಾಲ್ಕೂವರೆ ಗಂಟೆಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ವಿವಧ ರೀತಿಯ ಕಚೇರಿ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ಕಳೆದರು.

ಇಂದು ಪವಿತ್ರ ಶುಕ್ರವಾರದ ದಿನವಾಗಿತ್ತು. ಜುಮಅ ನಮಾಝ್ ನಿರ್ವಹಣೆಯ ವ್ಯವಸ್ಥೆ "ಬೈತುಸ್ಸುಬೂಹ್" ಸಮೀಪವಿರುವ ಒಂದು Sports Hall, Sport and Freizeitzentrum Kalbach ನಲ್ಲಿ ಮಾಡಲಾಗಿತ್ತು. ಈ ಕ್ರೀಡಾ ಸಭಾಂಗಣವು ತುಂಬ ವಿಶಾಲವಾದುದಾಗಿದೆ. ಅದರ ಒಂದು ಭಾಗದಲ್ಲಿ ಪುರುಷರಿಗೆ ವ್ಯವಸ್ಥೆ ಮಾಡಲಾಗಿತ್ತು ಮತ್ತು ಇನ್ನೊಂದು ಭಾಗದಲ್ಲಿ ಸ್ತ್ರೀಯರಿಗೆ ವ್ಯವಸ್ಥೆ ಮಾಡಲಾಗಿತ್ತು.

ತಮ್ಮ ಪ್ರೀತಿಯ ಇಮಾಮರ ನೇತೃತ್ವದಲ್ಲಿ ಜುಮಅ ನಮಾಝ್ ನಿರ್ವಹಿಸಲು ಜರ್ಮನಿಯ ವಿವಿಧ ಜಮಾಅತುಗಳಿಂದ ಜಮಾಅತ್ ಬಾಂಧವರು, ಸ್ತ್ರೀಯರು ಮುಂಜಾನೆಯಿಂದಲೇ ಈ ಕ್ರೀಡಾ ಕೇಂದ್ರಕ್ಕೆ ತಲುಪಲು ಪ್ರಾರಂಬಿಸಿದ್ದರು. ಕೆಲ ಕುಟುಂಬಗಳಂತೂ ಬಹುದೂರದ ಪ್ರಯಾಣ ಬೆಳೆಸಿ ಬಂದಿದ್ದರು. ಕೋಲೋನ್‌ನಿಂದ ಬಂದ ಕುಟುಂಬಗಳು 190 ಕಿ.ಮೀ, ಹಾಲುಡಲ್ ಬರ್ಗ್‌ಯಿಂದ 100 ಕಿ.ಮೀ, ಕೋಹಲ್ಸ್‌ನಿಂದ 180 ಕಿ.ಮೀ, ಕಾಸಿಲ್‌ನಿಂದ 200 ಕಿ.ಮೀ ಮತ್ತು ಹೆಂಬರ್ಗ್‌ನಿಂದ 500 ಕಿ.ಮೀಗಳಷ್ಟು ದೀರ್ಘ ದೂರವನ್ನು ಕ್ರಮಿಸಿ ಜುಮಅ ನಿರ್ವಹಿಸಲು ಬಂದು ತಲುಪಿದರು.

ಜಮಾಅತ್ ಬಾಂಧವರ ಆಗಮನದ ಒಂದು ಸರಪಳಿ ಕಟ್ಟಿದಂತಾಗಿತ್ತು. ಇಂದಿನ ಖುತುಬ ಜುಮಅ ಕ್ರೀಡಾ ಸಭಾಂಗಣದಿಂದ MTA ಮೇಲೆ ನೇರ ಪ್ರಸಾರ ಮಾಡಲಾಗುತ್ತಿತ್ತು. ಅದು ಲೋಕದಾದ್ಯಂತ ಪ್ರಸಾರಗೊಳ್ಳುತ್ತಿತ್ತು. ವಿವಿಧ ಭಾಷೆಗಳಲ್ಲಿ ಅನುವಾದವು ಮಾಮೂಲಿನಂತೆ ನೇರ ಪ್ರಸಾರಗೊಳ್ಳುತ್ತಿತ್ತು.

ಒಂದು ಗಂಟೆ 55 ನಿಮಿಷಕ್ಕೆ ಹುಜೂರ್ **"ಬೈತುಸ್ಸುಮೂಹ್** ಯಿಂದ ಕ್ರೀಡಾ ಸಭಾಂಗಣ KALBACH ಕ್ಕೆ ಹೊರಟರು. 2 ಗಂಟೆಗೆ ಹುಝೂರ್ ಕ್ರೀಡಾ ಸಭಾಂಗಣ ತಲುಪಿದರು. ಅಲ್ಲಿ ಖುತುಬ ಜುಮಅ ನೀಡಿದರು.

ಹುಝೂರ್ ಅವರ ಈ ಖುತುಬ ಜುಮಅದ ಸಾರಾಂಶವು 4 ಜೂನ್ 2015 ರ ಸಾಪ್ತಾಹಿಕ ಬದರ್ ಪತ್ರಿಕೆಯಲ್ಲಿ ಮತ್ತು ಅದರ ಸಂಪೂರ್ಣ ಖುತುಬವು 18 ಜೂನ್ 2015 ರ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಹುಝೂರರ ಈ ಖುತುಬ ಜುಮಅ 3 ಗಂಟೆಯವರಿಗೆ ನಡೆಯಿತು ಅನಂತರ ಹುಝೂರ್ ಜುಮಅ ನಮಾಝ್‌ದೊಂದಿಗೆ ಅವರ ನಮಾಝ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಮರಳಿ ಬೈತುಸ್ಸುಬುಹ್ ಆಗಮಿಸಿದರು ಮತ್ತು ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ಆಮೀನ್ ಸಮಾರಂಭ**

9 ಗಂಟೆ 40 ನಿಮಿಷಕ್ಕೆ ಹುಝೂರ್ ಮಸೀದಿಯ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಆಮೀನ್ ಸಮಾರಂಭ ಏರ್ಪಡಿಸಲಾಗಿತ್ತು.

ಹುಝೂರ್ ಈ ಕೆಳಗೆ ನಮೂದಿತ 24 ಬಾಲಕ, ಬಾಲಕಿಯರಿಂದ ಪವಿತ್ರ ಖುರ್‌ಆನ್‌ನ ಒಂದೊಂದು ವಚನಗಳನ್ನು ಆಲಿಸಿದರು ಮತ್ತು ಕೊನೆಯಲ್ಲಿ ದುಆ ಮಾಡಿಸಿದರು.

ರೀಹಾನ್ ಅಹ್ಮದ್, ಕಾಮ್ರಾನ್ ಅಹ್ಮದ್ ತಾಹಿರ್, ಬನ್ಯಾಮೀನ್, ಸಾಹಿಲ್ ಕಲೀಮ್, ಸಬೂರ್ ಅತಉಲ್ ಖುದ್ದೂಸ್, ತಫ್ರೀದ್ ಅಹ್ಮದ್, ಮಬ್ರೂರ್ ಅಹ್ಮದ್ ನಾಸಿರ್, ಶೆಹರ್ ಯಾರ್ ಅಹ್ಮದ್ ಖುರ್‌ಶೀದ್, ಫಾರಾನ್ ತಾಹಿರ್, ಮುಅಝ್ಝಮ್ ಝೈಬ್ ರಾನ, ರಮೀಝ್ ಉಬೈದ್, ವಹಾಬ್ ಸಯೀದ್, ಆತಿಫ್ ಅಹ್ಮದ್ ಜಾವೇದ್, ಸಾಖಿಬ್ ಅಹ್ಮದ್ ಜಾವೇದ್, ನಜೀಬುದ್ದೀನ್ ಉಮರ್ ಅಹ್ಮದ್.

ತಹ್ಮೀನ ಬುಶ್ರಹ್ ಹಸನ್, ಝೋಹಾ ಸಲೀಮ್, ಸಬೀಹ ರಹ್ಮಾನ್, ಶಾಫಿಅ ಸಾಖಿಬ್ ಶೇಖ್, ತಾಶಿಫ ಮಹ್ಮೂದ್, ಫರೀಹ ನುಸ್ರತ್ ಮಲಿಕ್, ಆಮಿನ ಗಫ್ಫಾರ್, ಅಮತುಲ್ ಮುಸವ್ವಿರ ರಝ್ಝಾಖ್, ಹನ್ನ ಕಂವಲ್, ಅಲೀಶ ಇಖ್ಬಾಲ್.

ಆಮೀನ್ ಸಮಾರಂಭದ ನಂತರ ಮಗ್ರಿಬ್ ಇಶಾಅ ನಮಾಝ್‌ಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

*************

**30 ಮೇ ಶನಿವಾರ 2015**

ಹುಝೂರ್ ಮುಂಜಾನೆ ನಾಲ್ಕೂವರೆ ಗಂಟೆಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಕಚೇರಿಯ ಅಂಚೆಗಳು, ಪತ್ರಗಳು ಮತ್ತು ವರದಿಗಳನ್ನು ಪರಿಶೀಲಿಸಿದರು. ತಮ್ಮ ಶುಭಹಸ್ತದಿಂದ ಈ ಪತ್ರಗಳ ಮತ್ತು ವರದಿಗಳ ಕುರಿತು ನಿರ್ದೇಶನಗಳನ್ನು ನೀಡಿದರು.

**(ಮುಂದುವರಿಯುವುದು)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

**ವಿಶೇಶ ಸೂಚನೆ**

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.